ಸಂಪುಟ : 8 ಸಂಚಿಕೆ : 271 ಪುಟ : 4 ಬೆಲೆ : 3.00 ಗುರುವಾರ ಡಿಸೆಂಬರ್ 7, 2023 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್. ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ...

VIJAYA SAKSHI KANNADA DAILY ಕನ್ನಡ ದಿನಪತ್ರಿಕೆ




Volume : 8 Issue : 271 Pages : 4 Price : 3.00 Thursday December 7, 2023 Gadag RNINo:KARKAN/2015/63412 E-mail: vijayasakshidaily@gmail.com Post Regn.No:GDG/72/2023-25

## ಇಂದಿನ ನೀರು ಪೂರೈಕೆ ವಿವರ

■ ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಬೆಟಗೇರಿ ಅವಳಿ ನಗರದಲ್ಲಿ ಡಿಸೆಂಬರ್ 7 ರಂದು ಈ ಕೆಳಗಿನ ಸ್ಥಳಗಳಿಗೆ ನೀರು ಪೂರೈಕೆ ಮಾಡಲಾಗುವುದು.

ಸ್ಥಳಗಳ ವಿವರ : ವಾರ್ಡ್ ನಂ. 28 ಪಂಚಾಕ್ಷರಿ ನಗರ 4ನೇ ಕ್ರಾಸ್, ನಾಗಪ್ಪನ ಕಟ್ಟಿ, ಸಂತೋಷ ಕಿರಾಣಿ ಲೈನ್, ಅಪಾರ್ಟ್‌ಮೆಂಟ್, ಅಬ್ಬಿಗೇರಿ ಕೃಷ್ಣ ಟ್ಯೂಷನ್ ಲೈನ್, ಸೊಲ್ಲಾ ಪಟ್ಟಿ ಲೈನ್, ಗವಾಯಿಗಳ ಆಶ್ರಮದ ಭಾಗಗಳು.

ವಾರ್ಡ್ ನಂ. 11,12 ನಿಸರ್ಗ ಬಡಾವಣೆ, ರಿಂಗ್ ರೋಡ್, ವಿವೇಕಾನಂದ ನಗರ, ಅಬ್ದುಲ್ ಕಲಾಂ ಲೈನ್, ಮಸೂತಿ ಲೈನ್, ವಾರ್ಡ್ ನಂ. 21, 22, 23 ಎಲಿಗಾರ ಪ್ಲಾಟ್, ತುಪ್ಪದವರ ಲೈನ್, ಕರಿಬಸಯ್ಯ ಅವರ ಲೈನ್, ಜಂತ್ಲಿಯವರ ಲೈನ್, ಕಮತರ ಪ್ಲಾಟ್, ಮುನವಳ್ಳಿ ಪ್ಲಾಟ್, ಹಕ್ಕಿಯವರ ಪ್ಲಾಟ್, ಶರಣಪ್ಪ ನಾಗಪ್ಪನ ಕಟ್ಟಿ, ಪಾಟೀಲ ಲೈನ್, ರಾಚೋಟೇಶ್ವರ ಮುಂದಿನ ಭಾಗ, ಮಸೂತಿ ಕೆಲವು ಉಳಿದ ಭಾಗಗಳು. ವಾರ್ಡ್ ನಂ. 1 ಎಸ್ ಎಂ ಕೃಷ್ಣ ನಗರ, ಮೇಲಿನ ಮಸೂತಿ ಪೂರ್ತಿ ಲೈನ್.

ಈಗಾಗಲೇ ಕುಡಿಯುವ ನೀರಿನ ನಳ ಹೊಂದಿರುವ ಬಾಕಿದಾರರ ಪಟ್ಟಿ ತಯಾರಿಸಿದ್ದು, ಅವುಗಳನ್ನು ದೃಶ್ಯ ಮಾಧ್ಯಮ ಹಾಗೂ ಸುದ್ದಿ ಮಾಧ್ಯಮಗಳಲ್ಲಿ ಪ್ರಕಟಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ನಾಗರಿಕರು ಕೂಡಲೇ ತಮ್ಮ ಕುಡಿಯುವ ನೀರಿನ ಕರವನ್ನು ಸಂದಾಯ ಮಾಡಿ ಸಹಕರಿಸಬೇಕೆಂದು ಗದಗ ಬೆಟಗೇರಿ ನಗರಸಭೆ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಬಿ.ಎಡ್. ಕೋರ್ಸ್ ಪ್ರವೇಶ ಅರ್ಜಿ ಸಲ್ಲಿಕೆ ಅವಧಿ ವಿಸ್ತರಣೆ

■ ವಿಜಯಸಾಕ್ಷಿ ಸುದ್ದಿ, ಬೆಳಗಾವಿ-ಸುವರ್ಣಸೌಧ

ಬೆಳಗಾವಿ ರಾಣಿ ಚನ್ನಮ್ಮ ವಿಶ್ವವಿದ್ಯಾಲಯ ಹಾಗೂ ವಿಜಯಪುರದ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ಪದವಿ ವಿದ್ಯಾರ್ಥಿಗಳ ಫಲಿತಾಂಶ ವಿಳಂಬವಾಗಿದೆ. ಬಿ.ಎಡ್. ಪ್ರವೇಶ ನೋಂದಣಿ ಕೊನೆಯ ದಿನ ಮುಕ್ತಾಯವಾಗುವುದರಿಂದ ಅನೇಕ ವಿದ್ಯಾರ್ಥಿಗಳಿಗೆ ತೆ-ಊಂದರೆ ಆಗುವುದನ್ನು ಗಮನಿಸಿ, ರಾಜ್ಯ ಸರಕಾರವು ಬಿ.ಎಡ್.ಪದವಿ ಪ್ರವೇಶ ನೋಂದಣಿ ಅವಧಿಯನ್ನು ಡಿ.11ರವರೆಗೆ ವಿಸ್ತರಿಸದೆ ಎಂದು ಕಂದಾಯ ಸಚಿವ ಕೃಷ್ಣಬೈರೇಗೌಡ ತಿಳಿಸಿದರು.

### ಆರೋಗ್ಯ ಇಲಾಖೆಯ ಜಿಲ್ಲಾ ಮಟ್ಟದ ಟಾಸ್ಕ್ ಫೋರ್ಸ್ ಸಮಿತಿ, ರಾಷ್ಟ್ರೀಯ ಆರೋಗ್ಯ ಮಿಷನ್ ಪ್ರಗತಿ ಪರಿಶೀಲನಾ ಸಭೆ

# ಸಾರ್ವಜನಿಕರಲ್ಲಿ ಸ್ವಚ್ಛತೆಯ ಅರಿವು ಮೂಡಿಸಿ: ಡಿಸಿ

■ ವಿಜಯಸಾಕ್ಷಿ ಸುದ್ದಿ, ಗದಗ

ಜಿಲ್ಲೆಯಲ್ಲಿನ ಶಾಲೆಗಳಲ್ಲಿ ನಿಯಮಿತವಾಗಿ ಮಕ್ಕಳ ಆರೋಗ್ಯ ತಪಾಸಣೆಗೆ ಕ್ರಮ ವಹಿಸಬೇಕು. ಅಂದಾಗ ಮಾತ್ರ ಮಕ್ಕಳಲ್ಲಿ ಕಂಡು ಬರುವ ಆರೋಗ್ಯ ಸಮಸ್ಯೆಯನ್ನು ಶೀಘ್ರವೇ ಗುಣಪಡಿಸಲು ಸಹಕಾರಿಯಾಗುತ್ತದೆ ಎಂದು ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್. ತಿಳಿಸಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಬುಧವಾರ ಆರೋಗ್ಯ ಇಲಾಖೆಯ ಜಿಲ್ಲಾ ಮಟ್ಟದ ಟಾಸ್ಕ್ ಫೋರ್ಸ್ ಸಮಿತಿ ಹಾಗೂ ರಾಷ್ಟ್ರೀಯ ಆರೋಗ್ಯ ಮಿಷನ್ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಶಾಲಾ ಶಿಕ್ಷಕರು ಹಾಗೂ ಮಕ್ಕಳಲ್ಲಿ ಕೈ ತೊಳೆದುಕೊಳ್ಳುವ ಹಾಗೂ ವೈಯಕ್ತಿಕ ಸ್ವಚ್ಛತೆ ಕಾಪಾಡುವ ಕುರಿತು ತಿಳುವಳಿಕೆ ನೀಡುವ ಕೆಲಸವಾಗಬೇಕು. ನಗರ ಹಾಗೂ ಗ್ರಾಮೀಣ ಪ್ರದೇಶ ಸೇರಿದಂತೆ 2ರಿಂದ 5 ವರ್ಷದೊಳಗಿನ ಮಕ್ಕಳಿಗೆ ದಡಾರ ಮತ್ತು ರುಬೆಲ್ಲಾ ಲಸಿಕೆ ಹಾಕಿಸಲು ಕ್ರಮ ವಹಿಸಬೇಕು. ಯಾವ ಮಗುವೂ ಲಸಿಕೆಯಿಂದ ವಂಚಿತರಾಗದಂತೆ ಕ್ರಮ ವಹಿಸಬೇಕು. ಕೀಟಜನ್ಯ ರೋಗಗಳಾದ



ಮಲೇರಿಯಾ, ಡೆಂಗ್ಯೂ, ಚಿಕುನ್ ಗುನ್ಯಾ ರೋಗಗಳನ್ನು ತಡೆಗಟ್ಟಲು ಮುಂಜಾಗ್ರತಾ ಕ್ರಮ ವಹಿಸುವಂತೆ ಸ್ಥಳೀಯ ಸಂಸ್ಥೆಗಳ ಸಹಭಾಗಿತ್ವದೊಂದಿಗೆ ಸಾರ್ವಜನಿಕರಲ್ಲಿ ಸ್ವಚ್ಛತೆ ಕುರಿತು ಅರಿವು ಮೂಡಿಸಬೇಕು.

ಒಂದು ವೇಳೆ ಶಾಲೆಗೆ ನಿಯಮಿತವಾಗಿ ಹಾಜರಾಗದೇ ಪದೇ ಪದೇ ಗೈರು ಇರುವ ಮಕ್ಕಳ ವಿವರ ಪಡೆದು ಅಂತಹ ಮಕ್ಕಳ ಆರೋಗ್ಯದ ಸ್ಥಿತಿಗತಿ ಕುರಿತು ಸಮೀಕ್ಷೆ ನಡೆಸಲು ಮುಂದಾಗಬೇಕೆಂದು ಜಿಲ್ಲಾಧಿಕಾರಿಗಳು ಸೂಚಿಸಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಎಸ್.ಎಸ್. ನೀಲಗುಂದ ಮಾತನಾಡಿ, 2023ರ ಏಪ್ರಿಲ್‌ನಿಂದ ಅಕ್ಟೋಬರ್‌ವರೆಗೆ 12,249 ಮಕ್ಕಳಿಗೆ ರುಬೆಲ್ಲಾ/ದಡಾರ ಲಸಿಕೆ ಹಾಕಲಾಗಿದೆ. ಅಕ್ಟೋಬರ್ ಮಾಹೆಯಲ್ಲಿ 427 ಅಂಗನವಾಡಿ ಕೇಂದ್ರಗಳಲ್ಲಿ ಮಕ್ಕಳ ಆರೋಗ್ಯ ತಪಾಸಣೆ ನಡೆಸಲಾಗಿದೆ.

ಸರ್ಕಾರಿ ಆಸ್ಪತ್ರೆಗಳಲ್ಲಿ ಸ್ವಚ್ಛತೆಗೆ ಆದ್ಯತೆ ನೀಡಬೇಕು. ಆರೋಗ್ಯಕರ ವಾತಾವರಣ ನಿರ್ಮಾಣವಾಗಬೇಕು. ಚಿಕಿತ್ಸೆ ಬಯಸಿ ಆಗಮಿಸುವ ರೋಗಿಗಳಿಗೆ ಸಹಾನುಭೂತಿಯಿಂದ ಆರೋಗ್ಯ ಇಲಾಖೆಯ ವೈದ್ಯರು, ಸಿಬ್ಬಂದಿಗಳು ನೋಡಿಕೊಳ್ಳಬೇಕಲ್ಲದೆ, ಉತ್ತಮ ಚಿಕಿತ್ಸೆ ನೀಡಬೇಕು ಎಂದರು. ಆಸ್ಪತ್ರೆಯ ಬಯೋಮೆಡಿಕಲ್ ತ್ಯಾಜ್ಯ ಕುರಿತಂತೆ ಮಾತನಾಡಿದ ಜಿಲ್ಲಾಧಿಕಾರಿಗಳು, ಬಯೋಮೆಡಿಕಲ್ ತ್ಯಾಜ್ಯ ನಿರ್ವಹಣೆ ನಿಯಮಾನುಸಾರ ಕೈಗೊಳ್ಳಬೇಕು. ಬಯೋಮೆಡಿಕಲ್ ತ್ಯಾಜ್ಯ ಸಮರ್ಪಕ ನಿರ್ವಹಣೆಯ ಕಾರ್ಯ ಎಲ್ಲ ಆಸ್ಪತ್ರೆಗಳಲ್ಲಿಯೂ ಸರಿಯಾಗಿ ಆಗಬೇಕು. ಈ ಕುರಿತು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ನಿಯಮಿತವಾಗಿ ಆಸ್ಪತ್ರೆಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಬೇಕು ಎಂದು ಜಿಲ್ಲಾಧಿಕಾರಿಗಳು ನಿರ್ದೇಶನ ನೀಡಿದರು.

▶▶ 3ನೇ ಪುಟಕ್ಕೆ

### ನಂದಿವೇರಿ ಸಂಸ್ಥಾನ ಮಠದ ಆವರಣದಲ್ಲಿ 'ಕಪ್ಪತ್ತಗುಡ್ಡ ಉತ್ಸವ'

# ಪಂಚ ಮಹಾಭೂತಗಳೇ ಮನುಷ್ಯನ ಆಸ್ತಿ




■ ವಿಜಯಸಾಕ್ಷಿ ಸುದ್ದಿ, ಮುಂಡರಗಿ

ಮಣ್ಣು, ನೀರು, ಗಾಳಿ, ಅಗ್ನಿ, ಆಕಾಶ ಇವು ಮನುಷ್ಯನ ಆಸ್ತಿಗಳು. ಎಲ್ಲಿಯವರೆಗೆ ಈ ಆಸ್ತಿಗಳಿಗೆ ತೊಂದರೆ ಇಲ್ಲವೋ ಅಲ್ಲಿಯವರೆಗೆ ದೇಶ ಸುರಕ್ಷಿತವಾಗಿರುತ್ತದೆ. ಅದಕ್ಕಾಗಿ ಜನರು ಇದ್ದ ಗಿಡಗಳನ್ನು ಉಳಿಸಿ, ಇನ್ನೂ ಹೆಚ್ಚಿನ ಸಸ್ಯ ಸಂಪತ್ತನ್ನು ಬೆಳೆಸಲು ಮುಂದಾಗಬೇಕು ಎಂದು ಕೊಲ್ಲಾಪುರದ ಕಣೇರಿವಾಡಿ ಸಿದ್ಧಗಿರಿ ಮಹಾಸಂಸ್ಥಾನಮಠದ ಜಗದ್ಗುರು ಅದೃಶ್ಯ ಕಾಡಸಿದ್ದೇಶ್ವರ ಮಹಾಸ್ವಾಮಿಗಳು ನುಡಿದರು.

ಡಂಬಳ ಹೋಬಳಿಯ ಡೋಣಿ ಸಮೀಪದ ಕಪ್ಪತ್ತಗುಡ್ಡದ ನಂದಿವೇರಿ ಸಂಸ್ಥಾನ ಮಠದ ಆವರಣದಲ್ಲಿ ಜರುಗಿದ 'ಕಪ್ಪತ್ತಗುಡ್ಡ ಉತ್ಸವ' ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ದೇಶದ ಶೇ.15ರಷ್ಟು ಜನರು ತಮ್ಮ ಲಾಭಕ್ಕಾಗಿ ಈ ಪಂಚಭೂತಗಳನ್ನು ನಿರಂತರವಾಗಿ ಹಾಳುಮಾಡುತ್ತಿದ್ದಾರೆ. ಚೆನ್ನೈನಂತ ನಗರಗಳ ಆಸ್ಪತ್ರೆಗಳಲ್ಲಿ, ಬೇಸಿಗೆ ಸಮಯದಲ್ಲಿ ನಿಮಗೆ ಅಗತ್ಯವಿರುವ ನೀರನ್ನು ನೀವೇ ತರಬೇಕು ಎಂದು ಫಲಕ ಹಾಕುತ್ತಾರೆ. ನಮ್ಮಲ್ಲಿಯೂ ಆ ಪರಿಸ್ಥಿತಿ ಬರಬಾರದು ಎಂದಾದರೆ ಈಗಲೇ ಎಚ್ಚೆತ್ತುಕೊಂಡು ಪರಿಸರವನ್ನು ಉಳಿಸಬೇಕಿದೆ ಎಂದರು.

ಕಪ್ಪತ್ತಗುಡ್ಡದ ನಂದಿವೇರಿ ಮಠದ ಶಿವಕುಮಾರ ಶ್ರೀಗಳು ಮಾತನಾಡಿ, ಸುತ್ತಲಿನ 15 ಜಿಲ್ಲೆಗಳಿಗೆ ಶುದ್ಧ ಗಾಳಿ ನೀಡುವ ಕಪ್ಪತ್ತಗುಡ್ಡವನ್ನು ಉಳಿಸಿ-ಬೆಳಸಿದಾಗ ಉತ್ತಮ ಮಳೆಯೊಂದಿಗೆ ಬೆಳೆಯನ್ನೂ ಹೊಂದಲು ಸಾಧ್ಯ ಎಂದರು.

ಕಪ್ಪತ್ತಗುಡ್ಡದ 80 ಸಾವಿರ ಎಕರೆ ಕಾಡು ಪ್ರದೇಶವನ್ನು ಸಂರಕ್ಷಿಸಿಕೊಳ್ಳಲು ಯಾವುದೇ ಗಣಿಗಾರಿಕೆಗೆ ಆಸ್ಪದ ನೀಡದಂತೆ ಜನ ಜಾಗೃತಿ ಮೂಡಿಸುವುದು ಮತ್ತು ಗಣಿಗಾರಿಕೆಗೆ ಅನುಮತಿ ನೀಡದಂತೆ ಸರಕಾರವನ್ನು ಆಗ್ರಹಿಸುವುದು ಮುಂತಾದ ಗೊತ್ತುವಳಿಗಳ ಕುರಿತು ತಿಳಿಸಿದರು.

ಮಾಜಿ ಸಹಕಾರ ಸಚಿವ ಎಸ್.ಎಸ್. ಪಾಟೀಲ್ ಮಾತನಾಡಿ, ಗಿಡಗಳನ್ನು ಬೆಳಸದಿದ್ದರೆ ರೈತರು ಬೆಳೆಯುವ ಬೆಳೆಗಳಿಗೆ ರೋಗ ಬಾಧೆಗಳು ಹೆಚ್ಚಾಗಲಿದೆ. ಎಲ್ಲರೂ ಎಚ್ಚೆತ್ತು ಗಿಡಗಳನ್ನು ಬೆಳಸಲು ಮುಂದಾಗಬೇಕು. ಅರಣ್ಯ ನಾಶದಿಂದ ನಮ್ಮ ಕೊಂಡಿಯಂತಿರುವ ಪ್ರಾಣಿ-ಪಕ್ಷಿ ಸಂಕುಲ ಅಳವಿನಂಚಿನಲ್ಲಿವೆ. ಅವುಗಳನ್ನು ಉಳಿಸಬೇಕಾಗಿದೆ ಎಂದು ಹೇಳಿದರು.

▶▶ 3ನೇ ಪುಟಕ್ಕೆ

### ನಗರಸಭೆ ನೌಕರರ ಸಹಕಾರಿ ಸಂಘದ ವತಿಯಿಂದ

# ಡಾ. ಅಂಬೇಡ್ಕರ ಪುತ್ಥಳಿಗೆ ಗೌರವಾರ್ಪಣೆ



■ ವಿಜಯಸಾಕ್ಷಿ ಸುದ್ದಿ, ಗದಗ

ಗದಗ-ಬೆಟಗೇರಿ ನಗರಸಭೆ ನೌಕರರ ಸಹಕಾರಿ ಸಂಘದ ವತಿಯಿಂದ ಬುಧವಾರ ಡಾ. ಬಿ.ಆರ್. ಅಂಬೇಡ್ಕರರ ಮಹಾಪರಿನಿರ್ವಾಣ ದಿನದ ನಿಮಿತ್ತ ಗದಗ-ಬೆಟಗೇರಿ ನಗರಸಭೆ ಆವರಣದಲ್ಲಿರುವ ಡಾ. ಬಿ.ಆರ್. ಅಂಬೇಡ್ಕರರ ಪುತ್ಥಳಿಗೆ ಮಾಲಾರ್ಪಣೆ ಮಾಡುವ ಮೂಲಕ ಗೌರವ ಸಮರ್ಪಿಸಲಾಯಿತು.

ಈ ಸಂದರ್ಭದಲ್ಲಿ ಗದಗ ಜಿಲ್ಲಾ ಯುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಕೃಷ್ಣಗೌಡ ಎಚ್. ಪಾಟೀಲ, ಲಕ್ಷ್ಮಣ ಛಲವಾದಿ, ಶೇಕಪ್ಪ ಬಿ. ತಮ್ಮಣ್ಣವರ, ಎಂ.ಎಂ. ಮಕಾನದಾರ, ಹೇಮೇಶ ಯಟ್ಟಿ, ಚಂದ್ರಶೇಖರ ಹಾದಿಮನಿ, ಅರವಿಂದ ಕುರ್ತಕೋಟಿ, ದ್ಯಾಮಣ್ಣ ಎಫ್. ರಾಮಗಿರಿ, ಹನಮಂತಪ್ಪ ದೊಡ್ಡಮನಿ, ನಾಗರಾಜ ಬಳ್ಳಾರಿ ಮುಂತಾದವರು ಭಾಗವಹಿಸಿದ್ದರು ಎಂದು ಕಾರ್ಯದರ್ಶಿ ಮರಿಯಪ್ಪ ಕೊಟ್ನಿಕಲ್ ತಿಳಿಸಿದ್ದಾರೆ.

# ಅಬಕಾರಿ ದಾಳಿ: 15 ಸಾವಿರ ರೂ. ಮೌಲ್ಯದ ಒಣಗಿದ ಗಾಂಜಾ ವಶಕ್ಕೆ

■ ವಿಜಯಸಾಕ್ಷಿ ಸುದ್ದಿ, ಗದಗ

ಖಚಿತ ಬಾತ್ಮಿಯ ಮೇರೆಗೆ ಗದಗ ತಾಲೂಕಿನ ತಿಮ್ಮಾಪುರ ಗ್ರಾಮದ ಹರಣಶಿಕಾರಿ ಕಾಲೋನಿಯಲ್ಲಿರುವ ಬಾಲಪ್ಪ ಪುನೋಜಪ್ಪ ಹರಣಶಿಕಾರಿ ಎಂಬುವವನಿಗೆ ಸೇರಿದ ವಾಸದ ಮನೆಯ ಮೇಲೆ ಅಬಕಾರಿ ದಾಳಿ ನಡೆಸಿ, ಅಂದಾಜು 15 ಸಾವಿರ ರೂ. ಮೌಲ್ಯದ 54 ಪೌಚ್‌ಗಳಲ್ಲಿಯ ಒಟ್ಟು 348 ಗ್ರಾಂ ಒಣಗಿದ ಗಾಂಜಾವನ್ನು ಜಪ್ತುಪಡಿಸಿಕೊಂಡಿದ್ದಾರೆ.

ಅಪರ ಅಬಕಾರಿ ಆಯುಕ್ತರು, ಅಪರಾಧ ಕೇಂದ್ರಸ್ಥಾನ ಬೆಳಗಾವಿ ಇವರ ನಿರ್ದೇಶದನಲ್ಲಿ, ಅಬಕಾರಿ ಜಂಟಿ ಆಯುಕ್ತರು, ಹೊಸಪೇಟೆ ವಿಭಾಗ ಮತ್ತು



ಅಬಕಾರಿ ಉಪ ಆಯುಕ್ತರು, ಉಪ ಅಧೀಕ್ಷಕರು ಗದಗ ಇವರ ಮಾರ್ಗದರ್ಶನದಲ್ಲಿ ಗದಗ ವಲಯದ ಅಬಕಾರಿ ನಿರೀಕ್ಷಕಿ ನೇತ್ರಾ ಉಪ್ಪಾರ, ಸಿಬ್ಬಂದಿಗಳಾದ ಆಶಾರಾಣಿ ಗುಡದಾರ, ಅಬಕಾರಿ ಪೇದೆಗಳಾದ ನಜೀರಸಾಬ ಖುದಾವಂದ, ಮಂಜುನಾಥಗೌಡ ರಾಯನಗೌಡ್ರ, ಅಂಬೋಜಿ ಹಾಳಕೇರಿ, ಚಾಲಕ ರಮೇಶ ಬೆಣಗಿ ಮತ್ತು ಪಂಚರುಗಳೊಂದಿಗೆ ಡಿ.5ರ ರಾತ್ರಿ: 8.15 ಗಂಟೆ ಸಮಯದಲ್ಲಿ ದಾಳಿ ನಡೆಸಲಾಗಿತ್ತು.

ಈ ಪ್ರಕರಣದಲ್ಲಿ ಆರೋಪಿಗಳಾದ ತಿಮ್ಮಾಪುರ ಗ್ರಾಮದ ಬಾಲಪ್ಪ ಪುನೋಜಪ್ಪ ಹರಣಶಿಕಾರಿ(52) ಹಾಗೂ ರೋಣ ತಾಲೂಕಿನ ಅಬ್ಬಿಗೇರಿಯ ಯಲ್ಲಪ್ಪ ಫಕ್ಕೀರಪ್ಪ ತೊಂಡಿಹಾಳ(37) ಎಂಬುವವರನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದ್ದು, ಪ್ರಕರಣದ ಕುರಿತು ಗದಗ ವಲಯ ಕಛೇರಿಯಲ್ಲಿ ಪ್ರಕರಣ ದಾಖಲಾಗಿದೆ.

# 'ಮಹಾಪರಿನಿರ್ವಾಣ' ಗೌರವ ಸಮರ್ಪಣೆ



■ ವಿಜಯಸಾಕ್ಷಿ ಸುದ್ದಿ,ಗದಗ

ಡಾ. ಬಿ.ಆರ್. ಅಂಬೇಡ್ಕರರ ಮಹಾಪರಿನಿರ್ವಾಣ ನಿಮಿತ್ತ ಗದಗ-ಬೆಟಗೇರಿ ನಗರಸಭೆ ವತಿಯಿಂದ ನಗರಸಭೆಯ ಆವರಣದಲ್ಲಿ ಡಾ. ಬಿ.ಆರ್. ಅಂಬೇಡ್ಕರರ ಪುತ್ಥಳಿಗೆ ಗೌರವ ನಮನ ಸಲ್ಲಿಸಲಾಯಿತು.

ನಗರಸಭಾಧ್ಯಕ್ಷೆ ಉಷಾ ಎಂ.ದಾಸರ, ಉಪಾಧ್ಯಕ್ಷೆ ಸುನಂದಾ ಪಿ.ಬಾಕಳೆ ಮಾಲಾರ್ಪಣೆ ಮಾಡಿ ಗೌರವ ನಮನ ಸಲ್ಲಿಸಿದರು.

▶▶ 3ನೇ ಪುಟಕ್ಕೆ

## ಸಂಪಾದಕೀಯ

### ಭ್ರಷ್ಟಾಚಾರ ನಿಯಂತ್ರಣ ಅಸಾಧ್ಯ

ನಾ ಮೇ ಖಾವುಂಗಾ, ನಾ ಖಾನೆ ದೂಂಗಾ (ನಾನು ತಿನ್ನಲ್ಲ, ತಿನ್ನಲೂ ಬಿಡಲ್ಲ) ಎಂದು ಪ್ರಧಾನಿ ನರೇಂದ್ರ ಮೋದಿ ಗುಡುಗಿ ಸರಿಸುಮಾರು ದಶಕ ಕಳೆಯುತ್ತಾ ಬಂದರೂ ದೇಶದಲ್ಲಿ ಭ್ರಷ್ಟಾಚಾರ ನಿಯಂತ್ರಣಕ್ಕೆ ಬಂದಿಲ್ಲ. ಭ್ರಷ್ಟಾಚಾರ ಮುಕ್ತ ಆಡಳಿತ ನೀಡುವ ಭರವಸೆ ನೀಡಿದ ಸಿದ್ದರಾಮಯ್ಯ ಎರಡನೆ ಬಾರಿಗೆ ಅಧಿಕಾರಕ್ಕೆ ಬಂದರೂ ಭ್ರಷ್ಟಾಚಾರಕ್ಕೆ ಕಡಿವಾಣ ಬಿದ್ದಿಲ್ಲ. ಬದಲಾಗಿ ಭ್ರಷ್ಟಾಚಾರ ಎನ್ನುವುದು ಬದುಕಿನ ಭಾಗ ಎನ್ನುವಷ್ಟು ಅದು ಗಟ್ಟಿಯಾಗಿದೆ. ಇನ್ನಷ್ಟು ಗಟ್ಟಿಯಾಗುವುದು ಅಷ್ಟೆ ನಿಚ್ಚಳವಾಗಿದೆ.

ಈ ಪೀಠಿಕೆಗೆ ಮುಖ್ಯ ಕಾರಣ ಲೋಕಾಯುಕ್ತ ಅಧಿಕಾರಿಗಳ ದಾಳಿ. ರಾಜ್ಯದ ಸುಮಾರು 13 ಭ್ರಷ್ಟ ಅಧಿಕಾರಿಗಳ ಮೇಲೆ ಲೋಕಾಯುಕ್ತರು ದಾಳಿ ನಡೆಸಿ ಕೋಟಿ ಕೋಟಿ ರೂ. ನಗದು, ಬಂಗಾರ-ಬೆಳ್ಳಿ, ಸ್ಥಿರಾಸ್ತಿ-ಚರಾಸ್ತಿ ವಶಪಡಿಸಿಕೊಂಡಿರುವುದು ನೋಡಿದರೆ ಭ್ರಷ್ಟಾಚಾರ ನಿಯಂತ್ರಣ ಸಾಧ್ಯವೇ ಇಲ್ಲ ಎನ್ನುವುದು ಸ್ಪಷ್ಟವಾಗುತ್ತದೆ.

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಸಂಬಂಧಿಕ, ಪ್ರಾಧ್ಯಾಪಕ, ಎಂಜಿನಿಯರ್, ಬೆಸ್ಕಾಂ ಅಧಿಕಾರಿ, ಅರಣ್ಯಾಧಿಕಾರಿ ಹೀಗೆ ಈ ಬಾರಿ ಎಲ್ಲ ಇಲಾಖೆಯ ಭ್ರಷ್ಟ ತಿಮಿಂಗಿಲುಗಳ ಮೇಲೆ ಲೋಕಾಯುಕ್ತರು ದಾಳಿ ನಡೆಸಿದ್ದಾರೆ. ಒಟ್ಟಾರೆ 65 ಕೋಟಿ ರೂ. ಅಕ್ರಮ ಆಸ್ತಿ ಪತ್ತೆಯಾಗಿರುವುದು ಪ್ರಾಥಮಿಕ ತನಿಖೆಯಿಂದ ಸ್ಪಷ್ಟವಾಗಿದೆ. ತನಿಖೆಯಿಂದ ಅಕ್ರಮ ಸಂಪಾದನೆಯ ಮೊತ್ತ ಮತ್ತಷ್ಟು ಹೆಚ್ಚಾಗಲಿದೆ.

ಸಾರ್ವಜನಿಕರ ನೇರ ಸಂಪರ್ಕಕ್ಕೆ ಬರುವ ಅಧಿಕಾರಿಗಳು ಸಹಜವಾಗಿ ಭ್ರಷ್ಟಾಚಾರಕ್ಕೆ ಮುಂದಾಗುತ್ತಾರೆ. ಆದರೆ ವಿದ್ಯೆ ಕಲಿಸಬೇಕಾದ ಪ್ರಾಧ್ಯಾಪಕರು ಅಕ್ರಮ ಮಾರ್ಗದ ಮೂಲಕ ಹಣ ಗಳಿಕೆ ಮಾಡುತ್ತಿದ್ದಾರೆ ಎನ್ನುವುದು ಆತಂಕ ಮೂಡಿಸಿದೆ. ಅದರಲ್ಲೂ ಸರಕಾರಿ ಶಿಕ್ಷಣ ಸಂಸ್ಥೆಗಳಲ್ಲಿ ಸೇವೆ ಮಾಡಿದವರು ಮತ್ತು ನಿವೃತ್ತರಾದವರು ಕೋಟಿ ಕೋಟಿ ರೂ. ಸಂಪಾದನೆ ಮಾಡಿರುವುದು ನೋಡಿದರೆ, ಬಡ ಮಕ್ಕಳ ಎದೆಗೆ ಅದೆಂಥ ಅಕ್ಷರ ಬಿತ್ತಿದ್ದಾರೆ ಎನ್ನುವುದನ್ನು ಯೋಚಿಸಬೇಕಿದೆ.

ಬೆಳಗಾವಿಯಲ್ಲಿ ನಡೆಯುತ್ತಿರುವ ಚಳಿಗಾಲದ ಅಧಿವೇಶನದಲ್ಲಿ ಸರಕಾರದ ಮಹತ್ವದ ನಿರ್ಧಾರ ಕೈಗೊಂಡಿದೆ. ಸರಕಾರಿ ನೇಮಕಾತಿಯಲ್ಲಿ ಅಕ್ರಮ ಎಸಗಿದವರಿಗೆ 10 ವರ್ಷ ಜೈಲು, 10 ಕೋಟಿ ರೂ. ದಂಡ ಮತ್ತು ಜಾಮೀನು ರಹಿತ ಅಪರಾಧ ವಿಧೇಯಕ ಮಂಡನೆಯಾಗಿದೆ. ಅದೇ ರೀತಿ ಇಂಥ ಭ್ರಷ್ಟಾಚಾರಿಗಳಿಗೂ ಕಠಿಣ ಶಿಕ್ಷೆ ವಿಧಿಸುವ ವಿಧೇಯಕ ಮಂಡನೆಯಾಗಬೇಕು. ಆದಾಯಕ್ಕೂ ಮೀರಿ ಆದಾಯ ಗಳಿಸಿದ್ದು ಲೋಕಾಯುಕ್ತ ದಾಳಿಯಿಂದ ಸ್ಪಷ್ಟವಾದರೂ ಇಂಥ ಅಧಿಕಾರಿಗಳಿಗೆ ತಕ್ಷಣ ಶಿಕ್ಷೆಯಾಗದಿರುವುದು ದುರ್ದೈವ.

ಚಳಿಗಾಲದ ಈ ಅಧಿವೇಶನದಲ್ಲಾದರೂ ಭ್ರಷ್ಟಾಚಾರ ನಿಯಂತ್ರಣ ವಿಷಯವಾಗಿ ಗಂಭೀರ ಚರ್ಚೆಯಾಗಲಿ. ಕೇವಲ ಕಡತಗಳಲ್ಲಿ ಉಳಿಯುವಂಥ ಕಾನೂನು ಜಾರಿಯಾಗದೆ, ಅನುಷ್ಠಾನಗೊಳ್ಳುವ ಪರಿಣಾಮಕಾರಿ ಕಾಯಿದೆ ರೂಪಗೊಳ್ಳಬೇಕಿದೆ. ಭ್ರಷ್ಟಾಚಾರ ನಿಯಂತ್ರಣಕ್ಕಾಗಿ ಇಂಥ ದಾಳಿಗಳ ಸಂಖ್ಯೆ ಹೆಚ್ಚಾಗಲು ಸರಕಾರ ಇನ್ನಷ್ಟು ಪ್ರೋತ್ಸಾಹ ನೀಡಬೇಕಿದೆ. ಇಷ್ಟೆಲ್ಲಾ ಮಾಡಿದರೂ ಭ್ರಷ್ಟಾಚಾರ ನಿರ್ಮೂಲನೆ ಆಗುವುದಿಲ್ಲ. ಆದರೆ ನಿಯಂತ್ರಿಸಲು ಸಾಧ್ಯವಿದೆ ಎನ್ನುವುದನ್ನು ಅರ್ಥ ಮಾಡಿಕೊಳ್ಳಬೇಕು.


## ಸುಂದರ 'ಸಾಸರವಾಡ ನಡುಗಡ್ಡೆ'ಯ ಏಕದಿನದ ಪ್ರವಾಸ ಕಥನ

# ಪ್ರವಾಸಿಗರನ್ನು ಕೈಬೀಸಿ ಕರೆವ ನಡುಗಡ್ಡೆ

ಆ ರವಿವಾರ 'ಸಂಡೆ ಪಿಕ್ನಿಕ್' ಮಾಡಬೇಕು ಎನ್ನುವುದು ನಮ್ಮ ಶಿಕ್ಷಕ ಸ್ನೇಹಿತರ ಅಭಿಲಾಷೆಯಾಗಿತ್ತು. ಅದರಂತೆ ಅಂದು ಬೆಳಿಗ್ಗೆ ನಮಗೆ ಎಲ್ಲಿಲ್ಲದ ಸಂಭ್ರಮ, ಸಡಗರ. ಇನ್ನೇನು ಪ್ರವಾಸ ಆರಂಭಿಸುವ ವೇಳೆ ಸಮೀಪಿಸುತ್ತಿದೆ ಎನ್ನುವಷ್ಟರಲ್ಲಿ ಗೆಳೆಯರಿಂದ ಗೆಳೆಯರಿಗೆ ಫೋನ್ ಕರೆಗಳ ಸರಮಾಲೆ. ಎಲ್ಲರಲ್ಲೂ ಒಂದೇ ಮಾತು, ನೀನು ರೆಡಿಯಾ, ನೀನು ರೆಡಿಯಾ! ನಮ್ಮ ಸಮೀಪವೇ ಇರುವ ಪ್ರಕೃತಿ ರಮಣೀಯ ತಾಣ ನೋಡಲೆಂದು ಬೈಕ್‌ನಲ್ಲಿ ಸಾಸರವಾಡ ನಡುಗಡ್ಡೆಯ ಏಕದಿನ ಪ್ರವಾಸ ಕೈಗೊಂಡಿದ್ದೆವೆನ್ನಿ. ಸಾಸಲವಾಡ ಅಥವಾ ಸಾಸರವಾಡ ಗದಗ ಜಿಲ್ಲೆಯ ಶಿರಹಟ್ಟಿ ತಾಲೂಕಿನ ಕೊನೆಯ ಗ್ರಾಮ.

ಅಂದು ಬೆಳಿಗ್ಗೆ 9 ಗಂಟೆಗೆ ಸರಿಯಾಗಿ ಹೊರಡುವ ಪ್ರವಾಸಕ್ಕಾಗಿ ಟೂರ್ ಸಂಚಾಲಕರಾದ ಈಶ್ವರ ಸರ್ ಸಾರಥ್ಯದಲ್ಲಿ ಎಲ್ಲ ಸಿದ್ಧತೆಗಳನ್ನೂ ಅಚ್ಚುಕಟ್ಟಾಗಿ ಮಾಡಿಕೊಳ್ಳಲಾಗಿತ್ತು. ಶುಭಾರಂಭದ ಪ್ರತೀಕವಾಗಿ ಲೋಕೇಶ್ ಅವರು ಪ್ರಾರ್ಥನೆಗೈದರು. ತಂಡದಲ್ಲಿ 56ರ ಹರೆಯದ ಹಿರಿಯರು, ಮಧ್ಯ ವಯಸ್ಕರು, ಉತ್ಸಾಹಿ ಯುವಕರೂ ಇದ್ದರು. ಬೆಳಿಗ್ಗೆ 10 ಗಂಟೆಗೆ ರಾಮಗೇರಿಯಿಂದ ನಾನು, ಉಳಿದವರು ಲಕ್ಷ್ಮೇಶ್ವರದಿಂದ ಹೊರಟೆವು. ಸತೀಶ್, ತಿರಕಪ್ಪ ಅವರೊಂದಿಗೆ ನಮ್ಮ ಪಯಣ ಸಾಗಿ ಸಾಸರವಾಡ ತಲುಪಿದೆವು.

ಹಚ್ಚ ಹಸಿರಿನ ಮಧ್ಯೆ ಸ್ವಚ್ಛಂದವಾಗಿ ಹರಿಯುವ ತುಂಗಭದ್ರಾ ನದಿಯ ನೀರು, ವನಸಿರಿಯ ಸೊಬಗು ಹೆಚ್ಚಿಸುವ ಪಕ್ಷಿ ಸಂಕುಲದ ಝೇಂಕಾರ, ವರ್ಷಪೂರ್ತಿ ಪ್ರಾಕೃತಿಕ ಸೌಂದರ್ಯದಲ್ಲಿ ಮಿಂದೇಳುವ ಸಾಸರವಾಡ ಸಮೀಪದ ನಡುಗಡ್ಡೆ, ಇದು ಶಿರಹಟ್ಟಿ ತಾಲ್ಲೂಕಿನ ಕೊನೆಯ ಗ್ರಾಮ. ವೈವಿಧ್ಯಮಯ ಸಸ್ಯ ಮತ್ತು ಪ್ರಾಣಿಗಳನ್ನು ವೀಕ್ಷಿಸುತ್ತಾ ಸೇತುವೆ ಕೆಳಗೆ ಹರಿಯುವ ತುಂಗಭದ್ರಾ ನದಿಯಲ್ಲಿ ಈಜಾಡಿ, ಸ್ನಾನ ಮಾಡಿದೆವು. ನಂತರ, ದ್ವೀಪದ ಮಧ್ಯೆ ಇರುವ ಶ್ರೀ ಶಂಕರಲಿಂಗ ಗಡ್ಡಿ





ಬಸವೇಶ್ವರ ದೇವಸ್ಥಾನದ ದೇವರ ಮತ್ತು ಶ್ರೀ ವೀರಭದ್ರೇಶ್ವರ ದೇವರ ದರ್ಶನ ಪಡೆದೆವು.

ಸಾಸರವಾಡದ ಗಡ್ಡಿ ಬಸವೇಶ್ವರ ನಡುಗಡ್ಡೆಯಲ್ಲಿ ಸುಮಾರು 300 ವರ್ಷಗಳ ಹಿಂದೆ ಸಹಸ್ರ ಋಷಿ ಮುನಿಗಳು ಸಾಧುಸಂತರು ಲೋಕ ಕಲ್ಯಾಣಕ್ಕಾಗಿ ಅನುಷ್ಠಾನ ಮಾಡಿರುವ ಇತಿಹಾಸವಿದೆ ಎನ್ನುವುದು ಪೂರ್ವಜರ ಮಾತು. ಅಂದಿನಿಂದ ಇಂದಿನವರೆಗೂ ಸಾಸರವಾಡ ಗಡ್ಡಿ ಬಸವೇಶ್ವರ ಹಾಗೂ ವೀರಭದ್ರೇಶ್ವರ ಜಾತ್ರೆಯು ಪ್ರಸಿದ್ಧಿ ಪಡೆದಿದೆ. ಕಳೆದ ವರ್ಷ ಕೇಳಿಕೊಂಡ ಸಂಕಲ್ಪವು ಈಡೇರಿದರೆ ಈ ವರ್ಷ ಬಂದು ದೇವರ ಹರಕೆ ತಿರಿಸಿ ದೇವರ ಕೃಪೆಗೆ ಪಾತ್ರರಾಗುತ್ತಾರೆ. ಕಾಡಿನ ಮಧ್ಯೆ ಹಾಗೂ ತುಂಗಭದ್ರಾ ನದಿಯ ನಡುಗಡ್ಡೆಯಲ್ಲಿರುವ ಜಾತ್ರೆ ವಿಜೃಂಭಣೆಯಿಂದ ನಡೆಯುತ್ತದೆ.

ಈ ಪುಣ್ಯಭೂಮಿಯು ಸುಮಾರು 120 ಎಕರೆಗೂ ಹೆಚ್ಚು ಅರಣ್ಯ ಪ್ರದೇಶವನ್ನು ಹೊಂದಿದೆ. ಈ ಅರಣ್ಯ ಪ್ರದೇಶದಲ್ಲಿ ಬೃಹದಾಕಾರದ ಗಿಡ, ಮರ, ಬಳ್ಳಿಗಳು ಹಾಗೂ ಹೇರಳವಾದ ವನಸ್ಪತಿಯ ಸಸ್ಯಗಳು ಕಂಡುಬರುತ್ತವೆ. ನೈಸರ್ಗಿಕವಾಗಿ ಸುಮಾರು 200 ವರ್ಷಗಳಿಂದ 300 ವರ್ಷಗಳ ಹಳೆಯ ಮರಗಳು ಇಲ್ಲಿ ಕಾಣಸಿಗುತ್ತವೆ.

ಇದು ತುಂಗಭದ್ರಾ ನದಿಯ ಮಧ್ಯೆ ಇರುವುದರಿಂದ ಮಲೆನಾಡಿನ ಯಾವ ಪ್ರೇಕ್ಷಣೀಯ ಸ್ಥಳಕ್ಕಿಂತಲೂ ಕಡಿಮೆ ಇಲ್ಲ. ಪ್ರತಿವರ್ಷ ರಾಜ್ಯದ ಬಳ್ಳಾರಿ, ಹಾವೇರಿ, ಬೆಳಗಾವಿ, ವಿಜಯನಗರ, ದಾವಣಗೆರೆ, ಧಾರವಾಡ, ಕೊಪ್ಪಳ ಇನ್ನೂ ಅನೇಕ ಜಿಲ್ಲೆಗಳಿಂದ ಭಕ್ತರು ಈ ಜಾತ್ರೆಗೆ ಆಗಮಿಸುತ್ತಾರೆ. ಸುಂದರ ರಮಣೀಯ ಈ ಸ್ಥಳ ನೋಡುವುದೇ ಮಹಾದಾನಂದ.

ನಮ್ಮ ತಂಡದಲ್ಲಿ ಫೇಮಸ್ ಬಾಣಸಿಗರಾದ ಸತೀಶ್ ಪಶುಪತಿಹಾಳ, ಆರ್.ಮಹಾಂತೇಶ, ತಿರಕಪ್ಪ ಪೂಜಾರ ಮತ್ತು ವಾಸು ದೀಪಾಳಿ ಅವರು ರುಚಿ ರುಚಿ ಅಡುಗೆ ತಯಾರಿಸಲು ಪ್ರಾರಂಭಿಸಿದರು. ಇಲ್ಲಿ ಈಶ್ವರ ಮೆಡ್ಲೇರಿ, ಹರೀಶ್. ಎಸ್, ಚಂದ್ರಶೇಖರ್ ವಡಕಣ್ಣವರ, ಉಮೇಶ್, ಗಿರೀಶ್ ನೇಕಾರ, ಲೋಕೇಶ್ ಮಠದ, ಮಹಾದೇವ ಭರಮಗೌಡರ, ಜಿ.ಆರ್. ಪಾಟೀಲ, ಎನ್.ಎ. ಮುಲ್ಲಾ ಹಾಗೂ ನಾನು ಬಾಣಸಿಗರಿಗೆ ಅಡುಗೆ ಸಹಾಯಕರಾಗಿದ್ದೆವು.

ಊಟ ಮುಗಿಸಿ, ಬಿಆರ್‌ಪಿ ಹುದ್ದೆಯಿಂದ ಬಿಡುಗಡೆ ಹೊಂದಿದ ಎಮ್.ಎನ್. ಭರಮಗೌಡರ ಹಾಗೂ ಸಿಆರ್‌ಪಿ ಹುದ್ದೆಯಿಂದ ಬಿಡುಗಡೆ ಹೊಂದಿದ ಜಿ.ಆರ್. ಪಾಟೀಲ ಮತ್ತು ಜಿ.ಎಚ್. ರಾಜೂರ ಅನುಪಸ್ಥಿತಿಯಲ್ಲಿ ಅವರಿಗೆ ಗೌರವಪೂರ್ವಕ ಬೀಳ್ಕೊಡುಗೆ ಹಮ್ಮಿಕೊಂಡೆವು. ಅಷ್ಟರಲ್ಲಾಗಲೇ ಸಾಯಂಕಾಲವಾಯಿತು. ನಂತರ ನಾವೆಲ್ಲರೂ ಮನೆ ಕಡೆಗೆ ಪ್ರಯಾಣ ಬೆಳೆಸಿದೆವು. ಲಕ್ಷ್ಮೇಶ್ವರ ಮತ್ತು ಶಿರಹಟ್ಟಿಯಿಂದ 45 ಕಿ.ಮೀ. ರಾಣಿಬೆನ್ನೂರ ಮತ್ತು ಹಾವೇರಿಯಿಂದ 50 ಕಿ.ಮೀ. ಅಂತರದಲ್ಲಿ ಹೊಳೆ ಇಟಗಿ ಮಾರ್ಗವಾಗಿ ಈ ತಾಣ ತಲುಪಬಹುದು.

**– ಬಸವರಾಜ ಎಮ್.ಯರಗುಪ್ಪಿ.**
ಬಿಆರ್‌ಪಿ, ಶಿರಹಟ್ಟಿ-ಲಕ್ಷ್ಮೇಶ್ವರ.

## ಮುಸ್ಲಿಮರ ಕಲ್ಯಾಣಕ್ಕೆ ಹಣ ಮೀಸಲು: ಸಿಎಂ ಹೇಳಿಕೆಗೆ ಬಿಜೆಪಿ ತೀವ್ರ ಆಕ್ಷೇಪ, ಸದನದಲ್ಲಿ ಕೋಲಾಹಲ



■ ವಿಜಯಸಾಕ್ಷಿ ಸುದ್ದಿ, ಬೆಳಗಾವಿ

ರಾಜ್ಯ ಬಜೆಟ್‌ನಲ್ಲಿ ಅಲ್ಪಸಂಖ್ಯಾತ ಸಮುದಾಯದ ಕಲ್ಯಾಣಕ್ಕಾಗಿ 10 ಸಾವಿರ ಕೋಟಿ ಮೀಸಲಿಡುವುದಾಗಿ ಘೋಷಿಸಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಹೇಳಿಕೆ ಬುಧವಾರ ವಿಧಾನಸಭೆಯಲ್ಲಿ ತೀವ್ರ ಕೋಲಾಹಲ ಸೃಷ್ಟಿಸಿತು.

ಇಂದು ವಿಧಾನಸಭೆಯಲ್ಲಿ ಈ ವಿಚಾರ ಪ್ರಸ್ತಾಪ ಮಾಡಿದ ಬಿಜೆಪಿ ಶಾಸಕ ಸುನೀಲ್ ಕುಮಾರ್ ಅವರು, ಅಧಿವೇಶನ ನಡೆಯುವಾಗ ಸಿಎಂ ಈ ರೀತಿ ಅನುದಾನ ಘೋಷಣೆ ಮಾಡುವುದು ಸರಿಯಲ್ಲ ಎಂದು ಆಕ್ಷೇಪ ವ್ಯಕ್ತಪಡಿಸಿದರು. ಅಲ್ಲದೆ ಮುಖ್ಯಮಂತ್ರಿಗಳು ವಿವರಣೆ ಎಂದು ಆಗ್ರಹಿಸಿದರು.

ಇದಕ್ಕೆ ಧ್ವನಿಗೂಡಿಸಿದ ಬಿಜೆಪಿ ಸದಸ್ಯರು, ಮುಸ್ಲಿಂ ಸಮಾವೇಶದಲ್ಲಿಅಲ್ಪಸಂಖ್ಯಾತರಿಗೆ 10,000 ಕೋಟಿ ರೂ. ಘೋಷಣೆ ಮಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸದನದ ಪಾವಿತ್ರ್ಯತೆಗೆ ಧಕ್ಕೆ ತಂದಿದ್ದಾರೆ ಎಂದು ಆರೋಪಿಸಿದರು. ಇದಕ್ಕೆ ಆಡಳಿತ ಪಕ್ಷದ ಸದಸ್ಯರು ತೀವ್ರ ವಿರೋಧ ವ್ಯಕ್ತಪಡಿಸಿದರು. ಈ ವೇಳೆ ಆಡಳಿತ ಹಾಗೂ ವಿರೋಧ ಪಕ್ಷದ ಸದಸ್ಯರ ನಡುವೆ ತೀವ್ರ ವಾಕ್ಸಮರ ನಡೆಯಿತು.

ರೈತರಿಗೆ ಬರ ಪರಿಹಾರ ನೀಡಲು ಸಾಧ್ಯವಾಗದ ಸರ್ಕಾರ, ವಿಧಾನಸಭೆಯ ಗಮನಕ್ಕೆ ತರದೆ ಅಲ್ಪಸಂಖ್ಯಾತರಿಗೆ 10 ಸಾವಿರ ಕೋಟಿ ರೂ. ಘೋಷಣೆ ಮಾಡುತ್ತಿದೆ ಎಂದ ಪ್ರತಿಪಕ್ಷ ನಾಯಕ ಆರ್ ಅಶೋಕ್ ಅವರು, ಮುಖ್ಯಮಂತ್ರಿಗಳು ತಮ್ಮ ಹೇಳಿಕೆಯನ್ನು ಹಿಂಪಡೆದು ಸದನದ ಕ್ಷಮೆಯಾಚಿಸಬೇಕು ಎಂದು ಒತ್ತಾಯಿಸಿದರು.

ನಾವು ಅಧಿಕಾರದಲ್ಲಿದ್ದಾಗ ಸದನ ನಡೆಯುವಾಗ ಎಲ್ಲೂ ಈ ರೀತಿಯ ಘೋಷಣೆ ಮಾಡಿಲ್ಲ. ಹತ್ತು ಸಾವಿರ ಕೋಟಿ ಬಜೆಟ್ ನಲ್ಲಿ ಅನುದಾನ ಕೊಡುತ್ತೇನೆ ಎಂದು ಸಿಎಂ ಘೋಷಣೆ ಮಾಡಿದ್ದಾರೆ. ಅಧಿವೇಶನ ನಡೆಯುವಾಗ ಈ ರೀತಿ ಮಾತನಾಡುವುದು ಸರಿಯಲ್ಲ ಎಂದರು.

ಸಿಎಂ ಪರವಾಗಿ ಮಾತನಾಡಿದ ಆಡಳಿತ ಪಕ್ಷದ ಸದಸ್ಯರು, ಸಿದ್ದರಾಮಯ್ಯನವರು ಅಲ್ಪಸಂಖ್ಯಾತರ ಇಲಾಖೆಗೆ ಪ್ರತಿ ವರ್ಷ ಬಜೆಟ್ ಹೆಚ್ಚಿಸುವ ಉದ್ದೇಶವಿದ್ದು, ಅಂತಿಮವಾಗಿ ಇಲಾಖೆ ಮೂಲಕ 10 ಸಾವಿರ ಕೋಟಿ ಖರ್ಚು ಮಾಡುವ ಉದ್ದೇಶವಿದೆ ಎಂದು ಹೇಳಿಕೆ ನೀಡಿದ್ದಾರೆ. ಆದರೆ ಅಲ್ಪಸಂಖ್ಯಾತರಿಗೆ ಹಣ ನೀಡುವುದನ್ನು ಬಿಜೆಪಿ ವಿರೋಧಿಸುತ್ತಿದೆ ಎಂದರು.



■ ವಿಜಯಸಾಕ್ಷಿ ಸುದ್ದಿ, ಬೆಟಗೇರಿ

ಪತಂಜಲಿ ಯೋಗ ಪೀಠ ಹರಿದ್ವಾರದ ಆಶ್ರಯದಲ್ಲಿ ಕರ್ನಾಟಕ ನಾಮಕರಣದ 50ನೇ ವರ್ಷಾಚರಣೆ ಅಂಗವಾಗಿ ನ.1ರಿಂದ ನ.30ರವರೆಗೆ 'ಯೋಗ ಮಹೋತ್ಸವ ಕರ್ನಾಟಕ' ಅಭಿಯಾನದಡಿ ಬೆಟಗೇರಿಯ ಸರಕಾರಿ ಬಾಲಕರ ಬಾಲ ಮಂದಿರದಲ್ಲಿ ನಾಗರತ್ನಾ ಬಡಿಗಣ್ಣವರ ಇವರು ಮಕ್ಕಳಿಗಾಗಿ 3 ದಿನಗಳ ವಿಶೇಷ ಯೋಗ ತರಬೇತಿ ಶಿಬಿರ ಆಯೋಜಿಸಿ, ಯೋಗ, ಧ್ಯಾನ, ಆಸನ, ಆಹಾರ, ವಿಹಾರ, ಜೀವನ ಪದ್ಧತಿಗಳನ್ನು ತಿಳಿಸಿಕೊಟ್ಟರು.

## ಅಮೃತ್ ಭಾರತ್ ನಿಲ್ದಾಣ ಯೋಜನೆ: ಕೆಆರ್ ಪುರಂ, ವೈಟ್‌ಫೀಲ್ಡ್ ಸೇರಿದಂತೆ 15 ರೈಲು ನಿಲ್ದಾಣಗಳ ನವೀಕರಣ

■ ವಿಜಯಸಾಕ್ಷಿ ಸುದ್ದಿ, ಬೆಂಗಳೂರು

ಬೆಂಗಳೂರಿನ ಹೊರವಲಯದಲ್ಲಿರುವ ರೈಲು ನಿಲ್ದಾಣಗಳು 'ಅಮೃತ್ ಭಾರತ್ ನಿಲ್ದಾಣ ಯೋಜನೆ' ಅಡಿಯಲ್ಲಿ ಹೊಸ ರೂಪ ಪಡೆಯಲು ಸಿದ್ಧವಾಗಿವೆ ಎಂದು ವಿಭಾಗೀಯ ರೈಲ್ವೆ ವ್ಯವಸ್ಥಾಪಕ ಯೋಗೇಶ್ ಮೋಹನ್ ಹೇಳಿದ್ದಾರೆ.

ಬಂಗಾರಪೇಟೆ, ಕೆಂಗೇರಿ, ಕೃಷ್ಣರಾಜಪುರಂ, ಮಂಡ್ಯ, ಚನ್ನಪಟ್ಟಣ, ಹೊಸೂರು, ಹಿಂದೂಪುರ, ಕುಪ್ಪಂ, ಮಾಲೂರು, ರಾಮನಗರ, ತುಮಕೂರು ಮತ್ತು ವೈಟ್‌ಫೀಲ್ಡ್ ಸೇರಿದಂತೆ 15 ನಿಲ್ದಾಣಗಳು ಆಧುನೀಕರಣಗೊಳ್ಳಲಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

ಸೋಮವಾರ ಬೆಂಗಳೂರು ವಿಭಾಗದ ವಿಭಾಗೀಯ ರೈಲ್ವೆ ಬಳಕೆದಾರರ ಸಲಹಾ ಸಮಿತಿ (ಡಿಆರ್‌ಯುಸಿಸಿ) ಮೂರನೇ ಸಭೆಯಲ್ಲಿ ಭಾಗವಹಿಸಿ ಮಾತನಾಡಿದ ಯೋಗೇಶ್ ಮೋಹನ್, ತುಮಕೂರಿನ ಕ್ಯಾತಸಂದ್ರ, ನಿಡವಂಡ, ಪೆನುಕೊಂಡ ಮತ್ತು ವೈಟ್‌ಫೀಲ್ಡ್‌ನಲ್ಲಿರುವ ಗೂಡ್ಸ್ ಶೆಡ್‌ಗಳನ್ನು ಫೆನ್ಸಿಂಗ್, ಆಶ್ರಯ, ವ್ಯಾಪಾರಿ ಕೊಠಡಿ, ಕಾರ್ಮಿಕರಿಗೆ ಕ್ಯಾಂಟೀನ್ ಮತ್ತು ವಿಶ್ರಾಂತಿ ಕೊಠಡಿಯಂತಹ ಸೌಲಭ್ಯಗಳೊಂದಿಗೆ ನವೀಕರಿಸಲು ಉದ್ದೇಶಿಸಲಾಗಿದೆ ಎಂದರು.

## ನಾಡಪ್ರಭು ಕೆಂಪೇಗೌಡ ಬಡಾವಣೆಗೆ ವರ್ಷದೊಳಗೆ ಮೂಲಸೌಕರ್ಯ

■ ವಿಜಯಸಾಕ್ಷಿ ಸುದ್ದಿ, ಬೆಳಗಾವಿ-ಸುವರ್ಣಸೌಧ



ನಾಡಪ್ರಭು ಕೆಂಪೇಗೌಡ ಬಡಾವಣೆಗೆ ಒಂದು ವರ್ಷದೊಳಗೆ ಅಗತ್ಯ ಮೂಲ ಸೌಕರ್ಯಗಳನ್ನು ಸರಕಾರ ಕಲ್ಪಿಸಿಕೊಡಲಿದೆ ಎಂದು ಸಾರಿಗೆ ಮತ್ತು ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದರು.

ವಿಧಾನಸಭೆಯಲ್ಲಿ ಸದಸ್ಯ ಸುರೇಶಕುಮಾರ್ ಅವರ ಚುಕ್ಕೆ ಗುರುತಿನ ಪ್ರಶ್ನೆಗೆ ಉಪಮುಖ್ಯಮಂತ್ರಿಗಳ ಪರವಾಗಿ ಉತ್ತರ ನೀಡಿದ ಸಚಿವರು, ನಾಡಪ್ರಭು ಕೆಂಪೇಗೌಡ ಬಡಾವಣೆಯಲ್ಲಿ ಮೂಲಸೌಕರ್ಯಗಳ ಕೊರತೆ ಇರುವುದರಿಂದ ಜನರು ಸಮಸ್ಯೆ ಅನುಭವಿಸುತ್ತಿರುವುದು ಗಮನದಲ್ಲಿದ್ದು, ಅದನ್ನು ವರ್ಷದೊಳಗೆ ಪರಿಹರಿಸಲಾಗುವುದು ಎಂದು ಭರವಸೆ ನೀಡಿದರು.

ಕಂದಾಯ ನ್ಯಾಯಾಲಯಗಳಲ್ಲಿ ಪ್ರಕರಣಗಳು ಬಾಕಿ, ರೆವಿನ್ಯೂ ನಿವೇಶನಗಳನ್ನು ರಚಿಸಿ ಮಾರಾಟ ಮಾಡಿರುವುದು, ಹೈಕೋರ್ಟ್‌ನಲ್ಲಿ ಪ್ರಕರಣಗಳು ದಾಖಲಾಗಿರುವುದರಿಂದ ಬಡಾವಣೆ ನಿರ್ಮಾಣಕ್ಕಾಗಿ 1400 ಎಕರೆ ಭೂಸ್ವಾಧೀನ ಮಾಡುವುದಕ್ಕೆ ಸರಕಾರಕ್ಕೆ ಸಮಸ್ಯೆಯಾಗಿದೆ. ನ್ಯಾಯಾಲಯಗಳಲ್ಲಿ ಬಾಕಿ ಇರುವ ರಿಟ್ ಅರ್ಜಿಗಳನ್ನು ಆದ್ಯತೆ ಮೇರೆಗೆ ಇತ್ಯರ್ಥಪಡಿಸಲು ಕ್ರಮವಹಿಸಲಾಗುತ್ತಿದ್ದು, ನಂತರ ಭೂಸ್ವಾಧೀನತೆಯನ್ನು ಶೀಘ್ರವಾಗಿ ಪೂರ್ಣಗೊಳಿಸಲಾಗುವುದು ಎಂದರು.

ಹಂಚಿಕೆದಾರರು ತಮ್ಮ ನಿವೇಶನದಲ್ಲಿ ಮನೆ ಕಟ್ಟಿಕೊಳ್ಳಲು ಆನ್‌ಲೈನ್ ಅನುಮೋದನೆ ಪಡೆಯಲು ಸೆಂಟರ್ ಫಾರ್ ಇ-ಗವರ್ನನ್ಸ್‌ರವರು ಅಗತ್ಯ ತಾಂತ್ರಿಕ ಸೌಕರ್ಯಗಳನ್ನು ಅಭಿವೃದ್ಧಿಪಡಿಸುತ್ತಿದ್ದು, 6 ತಿಂಗಳ ಕಾಲಾವಧಿಯಲ್ಲಿ ಈ ವ್ಯವಸ್ಥೆಯನ್ನು ಜಾರಿಗೊಳಿಸಲು ಯೋಜಿಸಲಾಗಿದೆ ಎಂದರು.

## ಮೈಸೂರಿನಲ್ಲಿ ವಿದೇಶಿಗರಿಂದ ಅಕ್ರಮವಾಗಿ ಹಣ ಸಂಪಾದನೆ: ಸ್ಥಳೀಯರ ಆರೋಪ

■ ವಿಜಯಸಾಕ್ಷಿ ಸುದ್ದಿ, ಮೈಸೂರು

ವಿದ್ಯಾರ್ಥಿ ವೀಸಾ ಅಥವಾ ಪ್ರವಾಸಿ ವೀಸಾದಲ್ಲಿ ಭಾರತಕ್ಕೆ ಭೇಟಿ ನೀಡುವ ವಿದೇಶಿಗರು ಇಲ್ಲಿ ಕೆಲಸ ಮಾಡದಂತೆ ಅಥವಾ ಹಣ ಸಂಪಾದಿಸದಂತೆ ಕಠಿಣ ಕಾನೂನುಗಳು ಇವೆ. ಆದರೂ ಮೈಸೂರಿನಲ್ಲಿ ವಿದೇಶಿಗರ ದೊಡ್ಡ 'ಅಕ್ರಮ' ಮಾರುಕಟ್ಟೆ ಕಾರ್ಯನಿರ್ವಹಿಸುತ್ತಿದೆ.

ಅರಮನೆ ನಗರಿಯನ್ನು 'ಅಷ್ಟಾಂಗ ಯೋಗ' ರಾಜಧಾನಿ ಎಂದು ಕರೆಯಲಾಗುತ್ತದೆ. ಸಾವಿರಾರು ವಿದೇಶಿಗರು ವಿಶೇಷವಾಗಿ ಯುರೋಪಿಯನ್ ದೇಶಗಳಿಂದ ಯೋಗ ಕಲಿಯಲು ಮತ್ತು ಪ್ರಮಾಣಪತ್ರ ಪಡೆಯಲು ಪ್ರತಿ ವರ್ಷ ಹೆಚ್ಚಿನ ಸಂಖ್ಯೆಯಲ್ಲಿ ಮೈಸೂರಿಗೆ ಭೇಟಿ ನೀಡುತ್ತಾರೆ. ಆದರೆ ಕೆಲವು ವಿದೇಶಿ ಪ್ರಜೆಗಳು, ಯೋಗವನ್ನು ಕಲಿಯುವ ಅಥವಾ ದೇಶದ ಸಂಸ್ಕೃತಿಯನ್ನು ಅಳವಡಿಸಿಕೊಳ್ಳುವ ನೆಪದಲ್ಲಿ ಈ ದೇಶದ ಕಾನೂನನ್ನು ಉಲ್ಲಂಘಿಸಿ ತ್ವರಿತವಾಗಿ ಹಣ ಸಂಪಾದಿಸುತ್ತಿದ್ದಾರೆ.

ಮೈಸೂರಿನಲ್ಲಿ ಯೋಗ ತರಗತಿಗಳಿಗೆ ದಾಖಲಾದ ಅಥವಾ ಪ್ರವಾಸಿ ವೀಸಾದಲ್ಲಿ ನಗರಕ್ಕೆ ಭೇಟಿ ನೀಡಿದ ಅನೇಕ ವಿದೇಶಿ ಪ್ರಜೆಗಳು, ಈ ವರ್ಷವೊಂದರಲ್ಲೇ ಸುಮಾರು 10 ಜನ, ಹಣ ಪಡೆದು ಫೋಟೋ ಶೂಟ್ ಯೋಜನೆಗಳನ್ನು ಪಡೆದುಕೊಂಡಿದ್ದಾರೆ ಮತ್ತು ಇದನ್ನೇ ವೃತ್ತಿಯಾಗಿ ಪರಿವರ್ತಿಸಿಕೊಂಡಿದ್ದಾರೆ. ಇದರಿಂದ ಉತ್ತಮ ಹಣ ಗಳಿಸುತ್ತಿದ್ದಾರೆ. ಇದರಿಂದ ಸ್ಥಳೀಯ ಛಾಯಾಗ್ರಾಹಕರಿಗೆ ಮತ್ತು ಚಲನಚಿತ್ರ ನಿರ್ಮಾಪಕರ ವ್ಯವಹಾರಗಳಿಗೆ ಹಾನಿಯಾಗುತ್ತಿದೆ.

ಕಳೆದ ಆರರಿಂದ ಏಳು ವರ್ಷಗಳಿಂದ ಇದು ಟ್ರೆಂಡ್ ಆಗಿದೆ ಎಂದು ಗೋಕುಲಂ ನಿವಾಸಿ ವಿನಯ್ ಅವರು ಹೇಳಿದ್ದಾರೆ.

ಯೋಗಕ್ಕಾಗಿ ನಗರಕ್ಕೆ ಭೇಟಿ ನೀಡುವ ಹೆಚ್ಚಿನ ವಿದೇಶಿಗರು ತಮ್ಮ ಕ್ಯಾಮೆರಾ, ಲೆನ್ಸ್ ಮತ್ತು ಇತರ ಗೇರ್‌ಗಳನ್ನು ಸಹ ತಂದಿರುತ್ತಾರೆ. ಮೊದಲು, ಅವರು ಶೀಘ್ರವಾಗಿ ಹಣ ಗಳಿಸುವ ಅವಕಾಶಗಳನ್ನು ಹುಡುಕುತ್ತಿದ್ದರು.

ಈಗ ಅದನ್ನು ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡುವ ಮೂಲಕ ವೃತ್ತಿಪರವಾಗಿ ವ್ಯವಹಾರ ನಡೆಸುತ್ತಿದ್ದಾರೆ. ಮುಂಗಡ-ಬುಕಿಂಗ್ ಅನ್ನು ಪಡೆಯುತ್ತಿದ್ದಾರೆ. ರೆಫರಲ್‌ಗಳಿಗಾಗಿ ಅವರು ಸ್ಥಳೀಯರಿಗೆ ಕಮಿಷನ್ ಸಹ ನೀಡುತ್ತಾರೆ" ಎಂದು ವಿನಯ್ ತಿಳಿಸಿದ್ದಾರೆ.

## ಮಹಾಪರಿನಿರ್ವಾಣ ದಿನದ ಗೌರವ ಸಮರ್ಪಣೆ



■ ವಿಜಯಸಾಕ್ಷಿ ಸುದ್ದಿ, ಗದಗ

ಎಸ್.ಸಿ/ಎಸ್.ಟಿ. ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಕರ ಕ್ಷೇಮಾಭಿವೃದ್ಧಿ ಸಂಘ ಗದಗ ಜಿಲ್ಲಾ ಘಟಕದ ಪದಾಧಿಕಾರಿಗಳು ಡಾ. ಬಿ.ಆರ್. ಅಂಬೇಡ್ಕರರ ಮಹಾಪರಿನಿರ್ವಾಣ ದಿನದ ನಿಮಿತ್ತ ಗದಗ-ಬೆಟಗೇರಿ ನಗರಸಭೆಯ ಆವರಣದಲ್ಲಿ ಡಾ. ಬಿ.ಆರ್. ಅಂಬೇಡ್ಕರರ ಪುತ್ಥಳಿಗೆ ಮಾಲಾರ್ಪಣೆ ಮಾಡಿ ಗೌರವ ಸಲ್ಲಿಸಿದರು.

ಈ ಸಂದರ್ಭದಲ್ಲಿ ಎಂ.ವಾಯ್. ತೇರದಾಳ, ವಸಂತ ಪ.ಕಲಕಂಬಿ, ಹೆಚ್.ಟಿ. ಹೊಸಮನಿ, ಹೆಚ್.ಈ. ಕಾಂಬ್ಳೆಕರ, ಈಶ್ವರ ಹೊಸಮನಿ, ಗಿರೀಶ ನರಗುಂದ, ಪಿ.ಎಲ್. ದೊಡ್ಡಮನಿ, ಎಸ್.ಡಿ. ಮಾದರ, ವೆಂಕಟೇಶ ಶಾಂತಗೇರಿ, ಎಸ್.ಎಚ್. ದಂಡಗಿದಾಸರ, ಚಾಮರಾಜ ಹುಡೇದ, ಟಿ.ಎಚ್. ದಾಸರ, ಜಯರಾಮ ಉಪಸ್ಥಿತರಿದ್ದರು.

## ರಾಜ್ಯಮಟ್ಟಕ್ಕೆ ಆಯ್ಕೆ



■ ವಿಜಯಸಾಕ್ಷಿ ಸುದ್ದಿ, ಗದಗ

ಸಾರ್ವಜನಿಕ ಶಿಕ್ಷಣ ಇಲಾಖೆಯಿಂದ ಪ್ರಸಕ್ತ ಸಾಲಿನ ಪ್ರಾಥಮಿಕ ಮತ್ತು ಪ್ರೌಢಶಾಲೆಯ ಶಿಕ್ಷಕರಿಗೆ ಸೋಮವಾರ ಗದಗನಲ್ಲಿ ನಡೆದ ಜಿಲ್ಲಾಮಟ್ಟದ ಸಹಪಠ್ಯ ಚಟುವಟಿಕೆಗಳ ಸ್ಪರ್ಧೆಯಲ್ಲಿ ಲಕ್ಷ್ಮೇಶ್ವರ ತಾಲೂಕಿನ ಒಡೆಯರ ಮಲ್ಲಾಪುರ ಮೊರಾರ್ಜಿ ವಸತಿ ಶಾಲೆಯ ಚಿತ್ರಕಲಾ ಶಿಕ್ಷಕ ಪ್ರವೀಣ ಗಾಯಕರ ಸ್ಥಳದಲ್ಲಿ ಚಿತ್ರ ಬರೆಯುವ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದು ರಾಜ್ಯಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

## ಡಬ್ಬಿಂಗ್ ಮುಗಿಸಿದ 'ತುಷಾರ್'



■ ವಿಜಯಸಾಕ್ಷಿ ಸುದ್ದಿ, ಬೆಂಗಳೂರು

ಅಪರಾಧಕ್ಕೆ ಸವಾಲು ದಿನಪತ್ರಿಕೆ ಸಹಯೋಗದಲ್ಲಿ ಮಲಗೊಂಡ ಫಿಲಂ ಪ್ರೊಡಕ್ಷನ್ ಬ್ಯಾನರಡಿಯಲ್ಲಿ ನಿರ್ಮಾಣವಾಗುತ್ತಿರುವ 'ತುಷಾರ' ಚಲನಚಿತ್ರದ ಡಬ್ಬಿಂಗ್ ಕಾರ್ಯ ಮುಕ್ತಾಯವಾಯಿತು.

ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಸಂಗೀತ ನಿರ್ದೇಶಕ ಮಂಜು ಕವಿ ಅವರ ಎಮ್.ಕೆ. ಸ್ಟುಡಿಯೋದಲ್ಲಿ ಸತತವಾಗಿ ಒಂದು ವಾರಗಳ ಕಾಲ 'ತುಷಾರ್' ಚಿತ್ರದ ಡಬ್ಬಿಂಗ್ ಕಾರ್ಯಗಳನ್ನು ನಡೆಸಲಾಯಿತು. ಈ ಸಿನಿಮಾಕ್ಕೆ ವಿಶ್ವಪ್ರಕಾಶ ಮಲಗೊಂಡ ನಟನೆಯ ಜೊತೆಗೆ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡಿದ್ದಾರೆ. ಚಿತ್ರದ ಮೂಲಕ ಯುವ ಪ್ರತಿಭಾನ್ವಿತ ಕಲಾವಿದೆ ಶಿಲ್ಪಾ ಮೂರ್ತಿ ನಾಯಕಿಯಾಗಿ ಚಿತ್ರರಂಗಕ್ಕೆ ಪರಿಚಯವಾಗುತ್ತಿದ್ದಾರೆ.

ರವಿ ಕುಂಟೋಜಿ ಛಾಯಾಗ್ರಹಣ, ಮಂಜು ಕವಿ ಸಂಗೀತ, ಸಾಹಿತ್ಯ-ಸಂಭಾಷಣೆ ಪವನ್ ಕುಮಾರ್ ಬೂದಿಹಾಳ, ಚಂದು ಸಂಕಲನ, ಉಮೇಶ್ ಕೆ.ಎನ್ ಪಬ್ಲಿಸಿಟಿ ಡಿಸೈನ್, ಪತ್ರಿಕಾ ಸಂಪರ್ಕ ಡಾ.ಪ್ರಭು ಗಂಜಿಹಾಳ, ಡಾ. ವೀರೇಶ ಹಂಡಗಿ, ಹರೀಶ್ ಅರಸು, ಪೋಸ್ಟರ್ ಡಿಸೈನ್ ವಿಶ್ವ ಬಿರಾದಾರ, ಪ್ರಸಾದ್ ತೋಟದ, ಸಹ ನಿರ್ದೇಶಕರಾಗಿ ಸುಧಾ ಅಣ್ಣಾಶೇಠ ಕಾರ್ಯ ನಿರ್ವಹಿಸಿದ್ದು, ತಂಡದಲ್ಲಿ ಪೃಥ್ವಿರಾಜ್ ನಾಯಕ, ಸಿದ್ದು ತಳ್ಳೋಳ್ಳಿ, ಚಂದ್ರಕಾಂತ ಬೂದಿಹಾಳ, ಶ್ರೇಯಶ್ ದೇಶಪಾಂಡೆ ಇದ್ದಾರೆ.

# ಪ್ರೋತ್ಸಾಹಧನಕ್ಕಾಗಿ ಅರ್ಜಿ ಆಹ್ವಾನ

■ ವಿಜಯಸಾಕ್ಷಿ ಸುದ್ದಿ, ಗದಗ

ರಾಜ್ಯದಲ್ಲಿ ಇತ್ತೀಚೆಗೆ ಕಾನೂನು ಪದವಿಯನ್ನು ಪಡೆದು ಹೊರಬರುವ ವಕೀಲರಿಗೆ ವೃತ್ತಿ ಜೀವನ ಪ್ರಾರಂಭ ಮಾಡುವ ಮೊದಲು ನುರಿತ ವಕೀಲರ ಜೊತೆಗೆ ಅವರ ವೃತ್ತಿ ಜೀವನದಲ್ಲಿ ಪ್ರಾರಂಭಿಕ ಹಂತದಲ್ಲಿ ಸಹಾಯಧನ ನೀಡುವ ಸಲುವಾಗಿ ಪ್ರತಿ ವಕೀಲರಿಗೆ ಪ್ರತಿ ತಿಂಗಳು ರೂ.2,000/- ರಂತೆ 24 ತಿಂಗಳುಗಳ ಪ್ರೋತ್ಸಾಹ ಧನಕ್ಕಾಗಿ 2023-24ನೇ ಸಾಲಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಅಭ್ಯರ್ಥಿಗಳು ರಾಜ್ಯದ ಬಾರ್ ಕೌನ್ಸಿಲ್‌ನಲ್ಲಿ 1-6-2022 ರಿಂದ 31-5-2023 ರವರೆಗಿನ ಅವಧಿಯಲ್ಲಿ ನೋಂದಾಯಿಸಿರಬೇಕು ಹಾಗೂ ವಾರ್ಷಿಕ ವರಮಾನ ರೂ.40,000/- ಮೀರಬಾರದು.

ತಾಲೂಕಾ ಬಾರ್ ಕೌನ್ಸಿಲ್‌ನಲ್ಲಿ ನೋಂದಣಿಯಾದವರು ಆಯಾ ತಾಲೂಕಾ ಹಿರಿಯ ನ್ಯಾಯಾಧೀಶರ ಮುಖಾಂತರ ಮತ್ತು ಜಿಲ್ಲಾ ಬಾರ್ ಕೌನ್ಸಿಲ್‌ನಲ್ಲಿ ನೋಂದಣಿಯಾದವರು ನೇರವಾಗಿ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಅಧ್ಯಕ್ಷರು ಜಿಲ್ಲಾ ಕಾನೂನು ಪದವೀಧರರ ಪ್ರೋತ್ಸಾಹ ಧನ ಆಯ್ಕೆ ಸಮಿತಿಗೆ ಜನವರಿ 12 ರೊಳಗಾಗಿ ಅರ್ಜಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ಕಚೇರಿ, ಹುಬ್ಬಳ್ಳಿ ರಸ್ತೆ, ಗದಗ ದೂ.ಸಂ. 08372- 222077 ಸಂಪರ್ಕಿಸಲು ಪ್ರಕಟಣೆ ತಿಳಿಸಿದೆ.

# 'ಮಹಾಪರಿನಿರ್ವಾಣ' ಗೌರವ ಸಮರ್ಪಣೆ

▶▶ ಮೊದಲನೇ ಪುಟದಿಂದ

ಈ ಸಂದರ್ಭದಲ್ಲಿ ಪೌರಾಯುಕ್ತ ಗಂಗಪ್ಪ ಎಂ., ಕಚೇರಿ ವ್ಯವಸ್ಥಾಪಕ ಪಿ.ಎಫ್. ಶೇರಖಾನೆ, ಸಹಾಯಕ ಕಾರ್ಯಪಾಲಕ ಅಭಿಯಂತರ ಎಚ್.ಎ. ಬಂಡಿವಡ್ಡರ, ಲೆಕ್ಕಾಧೀಕ್ಷಕ ಟಿ.ಎಚ್. ದ್ಯಾವನೂರ, ಸಿಎಓ ಶೋಭಾ ಬೆಳ್ಳಿಕೊಪ್ಪ, ಪರಿಸರ ಅಭಿಯಂತರ ಆನಂದ ಬದಿ, ಎ.ಎನ್. ಪುಣೇಕರ, ಕೆ.ಓ. ಯಾದವಾಡ, ಎಸ್.ವಾಯ್. ಸಂಕನಗೌಡ್ರ, ಸಿಂಧು ಗಾಳಿ ಜೆ.ಇ., ವೆಂಕಟೇಶ ರಾಮಗಿರಿ, ಎಂ.ಎಂ. ಮಕಾನದಾರ, ನಾಗೇಶ ಗೊರಣ್ಣವರ, ಸುಷ್ಮಾ ಗುಡಿ, ಎಂ.ಎಂ. ಮುಜಾವರ, ಎಸ್. ಎನ್. ದಳವಾಯಿ, ಎಸ್.ಎಂ. ಮಕಾನದಾರ, ಆರ್.ಎಚ್. ಬಾಕಳೆ, ರಾಕೇಶ ಮುಟಗಿ, ಬಿ.ಜಿ. ಹಿರೇಮಠ ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

## ಬೆಟಗೇರಿ ಶ್ರೀವೀರಭದ್ರೇಶ್ವರ-ಶ್ರೀಪರ್ವತಮಲ್ಲೇಶ್ವರ ದೇವಸ್ಥಾನದ ಶತಮಾನೋತ್ಸವ

# ಡಿ.11ರಿಂದ 29ರವರೆಗೆ ವಿವಿಧ ಕಾರ್ಯಕ್ರಮಗಳು

■ ವಿಜಯಸಾಕ್ಷಿ ಸುದ್ದಿ, ಗದಗ

ಬೆಟಗೇರಿಯ ಟೆಂಗಿನಕಾಯಿ ಬಝಾರ್‌ನಲ್ಲಿರುವ ಶ್ರೀವೀರಭದ್ರೇಶ್ವರ ಹಾಗೂ ಶ್ರೀಪರ್ವತಮಲ್ಲೇಶ್ವರ ದೇವಸ್ಥಾನದ ಶತಮಾನೋತ್ಸವವನ್ನು ಡಿ.11ರಿಂದ 29ರವರೆಗೆ ಹಮ್ಮಿಕೊಳ್ಳಲಾಗಿದ್ದು, ಪ್ರವಚನ, ಸಾಮೂಹಿಕ ರುದ್ರಪಠಣ, ಲಕ್ಷ ಬಿಲ್ವಾರ್ಚನೆ, ಶ್ರೀಭದ್ರಕಾಳಿ-ಶ್ರೀವೀರಭದ್ರೇಶ್ವರ ಕಲ್ಯಾಣೋತ್ಸವ, ಸಾಮೂಹಿಕ ವಿವಾಹ ಹಾಗೂ ಧರ್ಮಸಭೆ ಕಾರ್ಯಕ್ರಮಗಳು ಜರುಗಲಿವೆ.

ಡಿ.11ರಂದು ಮುಂಜಾನೆ 6 ಗಂಟೆಯಿಂದ ಗಣಪತಿ ಪೂಜೆ ಹಾಗೂ ಮಹಾ ರುದ್ರಾಭಿಷೇಕ, ಮುತ್ತೈದೆಯರಿಗೆ ಉಡಿ ತುಂಬುವ ಕಾರ್ಯಕ್ರಮ, ಬಳಿಕ ಮಹಾಪ್ರಸಾದ ಜರುಗಲಿದೆ. ಡಿ.13ರಂದು ಪೂರ್ಣಕುಂಭ ಸ್ವಾಗತ, ಶ್ರೀ ವೀರಭದ್ರೇಶ್ವರ ಪುರಾಣ ಪ್ರವಚನಕರ ನರೇಗಲ್ಲ ಹಿರೇಮಠದ ಮಲ್ಲಿಕಾರ್ಜುನ ಸ್ವಾಮೀಜಿ ಹಾಗೂ ಬೆಟಗೇರಿ ನೀಲಕಂಠಮಠದ ನೀಲಕಂಠ ಪಟ್ಟದಾರ್ಯ ಸ್ವಾಮೀಜಿ ಅವರನ್ನು 108 ಪೂರ್ಣಕುಂಭ ಮೆರವಣಿಗೆಯೊಂದಿಗೆ ಸ್ವಾಗತಿಸಲಾಗುವುದು.

ಡಿ.13ರಂದು ಸಂಜೆ 7 ಗಂಟೆಗೆ ಶ್ರೀವೀರಭದ್ರೇಶ್ವರ ಪುರಾಣ ಪ್ರವಚನ ಗದಗ ಶಿವಾನಂದ ಬ್ರಹನ್ಮಠದ ಸದಾಶಿವಾನಂದ ಸ್ವಾಮೀಜಿ ಸಾನ್ನಿಧ್ಯದಲ್ಲಿ ನರೇಗಲ್ಲ ಹಿರೇಮಠದ ಮಲ್ಲಿಕಾರ್ಜುನ ಸ್ವಾಮೀಜಿ ಅವರಿಂದ ಪ್ರಾರಂಭಗೊಳ್ಳುವುದು. ಡಿ.21ರಂದು ಬಳಗಾನೂರ ಚಿಕೇನಕೊಪ್ಪ ಚನ್ನವೀರ ಶರಣರ ಮಠದ ಶಿವಶಾಂತವೀರ ಶರಣರ ಸಾನ್ನಿಧ್ಯದಲ್ಲಿ ಪುರಾಣ ಪ್ರವಚನ ಮಂಗಲೋತ್ಸವ ಜರುಗಲಿದೆ.



- ಡಿ.13ರಿಂದ ಡಿ.21ರವರೆಗೆ ನಿತ್ಯ ಸಂಜೆ 7ಕ್ಕೆ ಪ್ರವಚನ ಹಾಗೂ ನಿತ್ಯ ದಾಸೋಹ.
- ಡಿ.26ಕ್ಕೆ ಶ್ರೀವೀರಭದ್ರೇಶ್ವರ ಸ್ವಾಮಿಯ ಮಹಾರಥೋತ್ಸವ.
- ಡಿ.27ಕ್ಕೆ ಅಗ್ನಿ ಮಹೋತ್ಸವ, ಲಘು ರಥೋತ್ಸವ, ಕಡುಬಿನಕಾಳಗ.
- ಡಿ.28ಕ್ಕೆ ಶ್ರೀಭದ್ರಕಾಳಿ-ಶ್ರೀವೀರಭದ್ರೇಶ್ವರ ಕಲ್ಯಾಣೊತ್ಸವ.
- ಸಾಮೂಹಿಕ ವಿವಾಹ ಹಾಗೂ ಧರ್ಮಸಭೆ.

ಡಿ.22ರಂದು ಮುಂಜಾನೆ 6.30ಕ್ಕೆ 108 ಮಹಿಳೆಯರಿಂದ ಸಾಮೂಹಿಕ ರುದ್ರಪಠಣ, 9ಕ್ಕೆ ಬೆಟಗೇರಿಯ ಪ್ರಮುಖ ಬೀದಿಗಳಲ್ಲಿ ಕಳಸದ ಮೆರವಣಿಗೆ ಜರುಗಲಿದೆ. ಡಿ.24ರಂದು ಮುಂಜಾನೆ 6.30ಕ್ಕೆ ಲಘು ರುದ್ರಹೋಮ ಹಾಗೂ ಗುಗ್ಗಳೋತ್ಸವ ಜರುಗಲಿದೆ. ಗದಗ ವೀರೇಶ್ವರ ಪುಣ್ಯಾಶ್ರಮದ ಕಲ್ಲಯ್ಯಜ್ಜನವರು, ಬೆಟಗೇರಿ ನೀಲಕಂಠ ಮಠದ ನೀಲಕಂಠ ಪಟ್ಟದಾರ್ಯ ಸ್ವಾಮೀಜಿ, ಹರ್ಲಾಪೂರ ಶ್ರೀಗುರು ಕೊಟ್ಟೂರೇಶ್ವರ ಮಠದ ಡಾ. ಕೊಟ್ಟೂರೇಶ್ವರ ಸ್ವಾಮೀಜಿ, ಮುಂಡರಗಿ-ನರಸಾಪೂರ ಅನ್ನದಾನೀಶ್ವರ ಮಠದ ಡಾ.ವೀರೇಶ್ವರ ಸ್ವಾಮೀಜಿ, ಗದಗ ಮುಕ್ಕಣ್ಣೇಶ್ವರ ಮಠದ ಶಂಕರಾನಂದ ಸ್ವಾಮೀಜಿ ಅವರ ಉಪಸ್ಥಿತಿಯಲ್ಲಿ ಪೂರ್ಣಾಹುತಿ, ಮಹಾಪ್ರಸಾದ ಜರುಗಲಿದೆ.

ಡಿ.25ರಂದು ಸೋಮವಾರ ಮುಂಜಾನೆ 6ಕ್ಕೆ ಶ್ರೀ ಪರ್ವತಮಲ್ಲೇಶ್ವರ ಮಹಾಸ್ವಾಮಿಗೆ 108 ದಂಪತಿಗಳಿಂದ ಲಕ್ಷ ಬಿಲ್ವಾರ್ಚನೆ ಜರುಗುವುದು. ಡಿ.26ರಂದು ಮುಂಜಾನೆ 6ಕ್ಕೆ ಶ್ರೀವೀರಭದ್ರೇಶ್ವರ ಮಹಾಸ್ವಾಮಿಗೆ 108 ದಂಪತಿಗಳಿಂದ ಲಕ್ಷ ಬಿಲ್ವಾರ್ಚನೆ ಹಾಗೂ ಸಂಜೆ 5 ಗಂಟೆಗೆ ಮಹಾ ರಥೋತ್ಸವ ಜರುಗಲಿದೆ. ಡಿ.27ರಂದು ಮುಂಜಾನೆ 9 ಗಂಟೆಗೆ ಅಗ್ನಿಮಹೋತ್ಸವ (ಅಗ್ನಿ ಹಾಯುವುದು), ಸಂಜೆ 7 ಗಂಟೆಗೆ ಲಘುರಥೋತ್ಸವ ಹಾಗೂ ಕಡುಬಿನ ಕಾಳಗ ಜರುಗಲಿದೆ.

ಡಿ.28ರಂದು ಮುಂಜಾನೆ 8ಕ್ಕೆ ಬೆಟಗೇರಿ ಹೊಸ ಬನಶಂಕರಿ ದೇವಸ್ಥಾನದಿಂದ ವಿವಿಧ ವಾದ್ಯಮೇಳ ಹಾಗೂ ವೀರಗಾಸೆ ತಂಡಗಳೊಂದಿಗೆ ರಂಭಾಪುರಿ ಜಗದ್ಗುರುಗಳು ಹಾಗೂ ಹಲವು ಮಠಗಳ ಶ್ರೀಗಳನ್ನು ಸ್ವಾಗತಿಸಲಾಗುವುದು. ಡಿ.28ರ ಮುಂಜಾನೆ 10.30ಕ್ಕೆ ಶ್ರೀಭದ್ರಕಾಳಿ-ಶ್ರೀವೀರಭದ್ರೇಶ್ವರ ಕಲ್ಯಾಣೊತ್ಸವ, ಸಾಮೂಹಿಕ ವಿವಾಹ ಹಾಗೂ ಧರ್ಮಸಭೆ ಬಾಳೆಹೊನ್ನೂರು ರಂಭಾಪುರಿ ಪೀಠದ ಜಗದ್ಗುರು ಡಾ. ವೀರಸೋಮೇಶ್ವರ ರಾಜದೇಶಿಕೇಂದ್ರ ಶಿವಾಚಾರ್ಯ ಭಗವತ್ಪಾದರು ಸಾನ್ನಿಧ್ಯದಲ್ಲಿ ಜರುಗಲಿದ್ದು, ಸೂಡಿ ಜುಕ್ತಿ ಹಿರೇಮಠದ ಡಾ.ಕೊಟ್ಟೂರ ಬಸವೇಶ್ವರ ಶಿವಾಚಾರ್ಯ ಸ್ವಾಮೀಜಿ, ಅಡ್ನೂರು-ರಾಜೂರು-ಗದಗ ದಾಸೋಹ ಮಠದ ಅಭಿನವ ಪಂಚಾಕ್ಷರ ಶಿವಾಚಾರ್ಯ ಸ್ವಾಮೀಜಿ ನೇತೃತ್ವ ವಹಿಸುವರು.

ರಾಣೆಬೆನ್ನೂರ ಗಚ್ಚಿನಮಠ, ಮದ್ದರಕಿ ಹಿರೇಮಠದ ಶಿವಯೋಗಿ ಶಿವಾಚಾರ್ಯ ಸ್ವಾಮೀಜಿ ಉಪದೇಶಾಮೃತ ನೀಡುವರು. ಗಣ್ಯ ವ್ಯಾಪಾರಸ್ಥರಾದ ಚಂದ್ರು ಬಾಳಿಹಳ್ಳಿಮಠ ಅವರಿಂದ ಪ್ರಾಸ್ತಾವಿಕ ನುಡಿ, ಬಳಿಕ 'ಗುಗ್ಗಳ ಪ್ರಿಯ' ಸ್ಮರಣ ಸಂಚಿಕೆ ಬಿಡುಗಡೆಗೊಳಿಸಲಾಗುವುದು. ಶತಮಾನೋತ್ಸವ ಸಮಿತಿ ಅಧ್ಯಕ್ಷರು, ಗಣ್ಯ ವ್ಯಾಪಾರಸ್ಥರಾದ ರವಿ ಪಟ್ಟಣಶೆಟ್ಟರ ಅಧ್ಯಕ್ಷತೆ ವಹಿಸುವರು.

ಮುಖ್ಯ ಅತಿಥಿಗಳಾಗಿ ಗದಗ ಪೇಟೆವೀರಭದ್ರೇಶ್ವರ ದೇವಸ್ಥಾನದ ಅಧ್ಯಕ್ಷ ಗಂಗಾಧರ ಕೋಟಿ, ಸಾಯಿಬಾಬಾ ದೇವಸ್ಥಾನದ ಅಧ್ಯಕ್ಷ ಡಾ. ಎಸ್.ಬಿ. ಶೆಟ್ಟರ, ಸಿಂಗಟಾಲೂರು ವೀರಭದ್ರೇಶ್ವರ ದೇವಸ್ಥಾನದ ಅಧ್ಯಕ್ಷ ಕರಬಸಪ್ಪ ಹಂಚಿನಾಳ, ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿರ್ದೇಶಕ ರವೀಂದ್ರ ಕಲಬುರ್ಗಿ, ಬಾಗಲಕೋಟ ಮುಚಖಂಡಿ ವೀರಭದ್ರೇಶ್ವರ ದೇಸ್ಥಾನದ ಪ್ರಧಾನ ಅರ್ಚಕ ಪ್ರಭುಸ್ವಾಮಿ ಸರಗಣಾಚಾರಿ, ಶಿಗ್ಲಿಯ ಗಣ್ಯ ವ್ಯಾಪಾರಸ್ಥರಾದ ಪ್ರಭು ಪವಾಡದ, ಗದಗ-ಬೆಟಗೇರಿ ನಗರಸಭೆ ಸದಸ್ಯ ರಾಘವೇಂದ್ರ ಯಳವತ್ತಿ ಪಾಲ್ಗೊಳ್ಳುವರು.

ಗಣ್ಯರಿಗೆ ಹಾಗೂ ದಾನಿಗಳಿಗೆ ಗುರುರಕ್ಷೆ ನೀಡಲಾಗುವುದು. ಗಾನಭೂಷಣ ವೀರೇಶ ಕಿತ್ತೂರ ಅವರಿಂದ ಭಕ್ತಿಗೀತೆಗಳು ಜರುಗಲಿವೆ. ಎಲ್ಲ ಕಾರ್ಯಕ್ರಮಗಳಲ್ಲಿ ಸದ್ಭಕ್ತರು ಪಾಲ್ಗೊಳ್ಳಬೇಕು ಎಂದು ಶ್ರೀವೀರಭದ್ರೇಶ್ವರ ಸದ್ಭಕ್ತ ಮಂಡಳಿ ಪ್ರಕಟಣೆಯಲ್ಲಿ ತಿಳಿಸಿದೆ.



■ ವಿಜಯಸಾಕ್ಷಿ ಸುದ್ದಿ, ಗದಗ

ಡಾ. ಬಿ.ಆರ್. ಅಂಬೇಡ್ಕರರ ಮಹಾಪರಿನಿರ್ವಾಣ ನಿಮಿತ್ತ ಅಖಿಲ ಕರ್ನಾಟಕ ಚನ್ನದಾಸರ ಸಮಾಜದ ಅಲೆಮಾರಿ ಬಾಂಧವರು ಗದಗ-ಬೆಟಗೇರಿ ನಗರಸಭೆಯ ಆವರಣದಲ್ಲಿ ಡಾ. ಬಿ.ಆರ್. ಅಂಬೇಡ್ಕರರ ಪುತ್ಥಳಿಗೆ ಗೌರವ ನಮನ ಸಲ್ಲಿಸಿದರು. ಈ ಸಂದರ್ಭದಲ್ಲಿ ಸಮಾಜದ ಮುಖಂಡರಾದ ಪ್ರೊ. ಕೆ.ಎಚ್. ಬೇಲೂರ, ಎಚ್.ಟಿ. ಸಂಜೀವಸ್ವಾಮಿ, ವ್ಹಿ.ಬಿ. ಶೇಷಗಿರಿ, ಲಕ್ಷ್ಮಣ ಶೇಷಗಿರಿ, ರಾಮಣ್ಣ ಖ್ಯಾಡದ, ಭೀಮಸಿ ಬೂದಿಹಾಳ, ಪಾಂಡುರಂಗ ಕೊಪ್ಪದ, ತುಳಸಪ್ಪ ದಾಸರ, ಶ್ರೀಕಾಂತ ಸಂಜೀವಸ್ವಾಮಿ, ಯಮನೂರಪ್ಪ ದಂಡಗಿದಾಸರ ಉಪಸ್ಥಿತರಿದ್ದರು.

# ಪಂಚ ಮಹಾಭೂತಗಳೇ ಮನುಷ್ಯನ ಆಸ್ತಿ

▶▶ ಮೊದಲನೇ ಪುಟದಿಂದ

ಕೊಡುಗು ವಿ.ವಿ ಕುಲಪತಿ ಡಾ.ಅಶೋಕ ಆಲೂರ, ಧಾರವಾಡ ಕೃಷಿ ವಿ.ವಿ ಕುಲಪತಿ ಡಾ. ಪಿ.ಎಲ್. ಪಾಟೀಲ್, ಪಂಚಾಯತ್‌ರಾಜ್ ವಿ.ವಿ ಕುಲಪತಿ ವಿಶ್ವನಾಥ ಚಟಪಲ್ಲಿ ಮಾತನಾಡಿ, ತಾನೂ ಬದುಕಬೇಕು, ಮುಂದಿನ ಪೀಳಿಗೆಯೂ ಬದುಕಬೇಕು ಎಂದರೆ ಪ್ರತಿಯೊಬ್ಬರೂ ಅರಣ್ಯ ಸಂಪತ್ತನ್ನು ಬೆಳೆಸಿದಾಗ ಮಾತ್ರ ಸಾಧ್ಯ. ಪ್ರಫುಲ್ಲವಾದ ವಾತಾವರಣ ಇರಬೇಕಾದರೆ ಕಪ್ಪತ್ತಗುಡ್ಡ ಸಮೃದ್ಧವಾಗಿರಬೇಕು ಎಂದರು.

ಡಾ .ಆರ್.ಆರ್. ಹಂಚಿನಾಳ, ದೇವೆಂದ್ರಪ್ಪ ಬಳೂಟಗಿ ಮಾತನಾಡಿದರು. ಗಣೇಶಸಿಂಗ ಬ್ಯಾಳಿ ಪ್ರಸ್ತಾವಿಕವಾಗಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಗುರುನಾಥಗೌಡ ಓದುಗೌಡರ, ಡಾ. ಎಂ.ಎಸ್. ಉಪ್ಪಿನ, ದೇವೆಂದ್ರಪ್ಪ ಬೂಲವಟಗಿ, ಬಿ.ಎಸ್. ಅಂಗಡಿ, ದೇವರಡ್ಡಿ ಅಗಸಿನಕೊಪ್ಪ, ದೇವಪ್ಪ ಅರಹುಣಸಿ, ಅಶೋಕ ಸಂಕಣ್ಣವರ, ಗೋವಿಂದಪ್ಪ ಗೌಡಪ್ಪಗೋಳ, ಮಂಗಲಾ ನೀಲಗುಂದ ಸೇರಿದಂತೆ ಗ್ರಾಮಸ್ಥರು ಉಪಸ್ಥಿತರಿದ್ದರು. ಸಿ.ಎಸ್. ಅರಸನಾಳ ಕಾರ್ಯಕ್ರಮ ನಿರೂಪಿಸಿದರು.



■ ವಿಜಯಸಾಕ್ಷಿ ಸುದ್ದಿ, ಗದಗ

ಗದುಗಿನ ತಾಜ್ ನಗರ ಗಂಗಿಮಡಿ ರಸ್ತೆಯಲ್ಲಿರುವ ಹಿದಾಯತ್ ಜೆ ಯು ಹಿರಿಯ ಆಂಗ್ಲಮಾಧ್ಯಮ ಶಾಲೆಯ ವಿದ್ಯಾರ್ಥಿಗಳಿಗೆ ಬಳ್ಳಾರಿಯ ವಾಟರ್ ಪಾರ್ಕ್‌ಗೆ ಒಂದು ದಿನದ ಪ್ರವಾಸವನ್ನು ಬುಧವಾರ ಆಯೋಜಿಸಲಾಗಿತ್ತು. ಶಾಲೆಯ ಅಧ್ಯಕ್ಷ ಜುನೆದ ಉಮಚಗಿ ಹಾಗೂ ಶಾಲೆಯ ಪ್ರಧಾನ ಗುರುಮಾತೆ ಪಿ.ಬಿ. ಗುದಗಿ ನೇತೃತ್ವದಲ್ಲಿ ವಿದ್ಯಾರ್ಥಿಗಳು ಪ್ರವಾಸಕ್ಕೆ ತೆರಳಿದರು.

# ಶಹರ ಕಾಂಗ್ರೆಸ್ ಪರಿಶಿಷ್ಟ ಜಾತಿ ವಿಭಾಗದಿಂದ ಗೌರವ ನಮನ

■ ವಿಜಯಸಾಕ್ಷಿ ಸುದ್ದಿ, ಗದಗ

ಗದಗ-ಬೆಟಗೇರಿ ಶಹರ ಕಾಂಗ್ರೆಸ್ ಪರಿಶಿಷ್ಟ ವಿಭಾಗದ ವತಿಯಿಂದ ಡಾ. ಬಿ.ಆರ್. ಅಂಬೇಡ್ಕರರ 67ನೇ ವರ್ಷದ ಪರಿನಿರ್ವಾಣದ ನಿಮಿತ್ತ ಬುಧವಾರ ಗದಗ-ಬೆಟಗೇರಿ ನಗರಸಭೆ ಆವರಣದಲ್ಲಿರುವ ಡಾ. ಬಿ.ಆರ್. ಅಂಬೇಡ್ಕರರ ಪುತ್ಥಳಿಗೆ ಗದಗ-ಬೆಟಗೇರಿ ಶಹರ ಕಾಂಗ್ರೆಸ ಪರಿಶಿಷ್ಟ ಜಾತಿ ವಿಭಾಗದ ಪ್ರಧಾನ ಕಾರ್ಯದರ್ಶಿ ಶ್ರೀಕಾಂತ ಮಳಲಿ ನೇತೃತ್ವದಲ್ಲಿ ಮಾಲಾರ್ಪಣೆ ಮಾಡಲಾಯಿತು.



ಈ ಸಂದರ್ಭದಲ್ಲಿ ನಗರಸಭೆ ಸದಸ್ಯ ಚಂದ್ರು ಕರಿಸೋಮನಗೌಡ್ರ, ಯುವ ಕಾರ್ಯಕರ್ತರಾದ ರಾಜು ಅಣ್ಣೀಗೇರಿ, ಜಹೀರ ಗಡಾದ, ಮಲ್ಲು ಬಾರಕೇರ, ಅನ್ನಪ್ಪ ಗಾರವಾಡ, ಸಾದಿಕ ಬಳ್ಳಾರಿ, ಸುರೇಶ ತರವಾಡೆ, ಬಸೀರ ಗಡಾದ, ಬಸು ಹುಯಿಲಗೋಳ, ಪ್ರಭು ಬುರಬುರೆ, ಪರಮೇಶ ಕಾಳೆ, ರಾಘವೇಂದ್ರ ಮಿಟ್ಟಿ, ಚೇತನ ಇಟಗಿ, ಸಂಜು ಶ್ಯಾವಿ, ದಾದಾಯತ ಮುದಗಲ್ಲ, ಕಾಶೀಮ ನರಗುಂದ, ತೌಫೀಕ ಹುಯಿಲಗೋಳ, ಅಕ್ಷಯ ಬಿಳೆಯಲಿ, ಕಿರಣ ಬಾಳಿಕಾಯಿ, ವಿಶಾಲ ಬಣಕಾರ, ರಾಜು ತಳಕಲ್ಲ, ಈಶ್ವರ ಗೊಟೂರ, ಅಜರುದ್ದೀನ ಬೋದ್ಲೆಖಾನ, ಅಕ್ರಮ ಚೌಧರಿ, ಮುರ್ತಿಜಾ ಮುಲ್ಲಾ, ಗಣೇಶ ಕಬಾಡಿ, ಸಾತ್ವಿಕ (ಶ್ರೇಯಸ್) ಮಳಲಿ, ಪ್ರೀತಮ್ ಕಾಳೆ, ಮಂಜುನಾಥ ಮುಳಗುಂದ, ಕೇಶವ ಮಿಟ್ಟಿ, ಫಯಾಜ ನದಾಫ, ರಾಜಾಸಾಬ ಮಕಾನದಾರ ಉಪಸ್ಥಿತರಿದ್ದರು.

## ಸಮಯಕ್ಕೆ ಬಾರದ ಸಾರಿಗೆ ಇಲಾಖೆಯ ಬಸ್‌ಗಳು । ತಪ್ಪದ ವಿದ್ಯಾರ್ಥಿಗಳ ಸಮಸ್ಯೆ

# ರಾಜ್ಯ ಹೆದ್ದಾರಿ ತಡೆದು ವಿದ್ಯಾರ್ಥಿಗಳಿಂದ ಪ್ರತಿಭಟನೆ



■ ವಿಜಯಸಾಕ್ಷಿ ಸುದ್ದಿ, ನರಗುಂದ

ತಾಲೂಕಿನ ಶಿರೋಳ ಗ್ರಾಮದಲ್ಲಿ ಸಮರ್ಪಕ ಬಸ್ ಸೌಕರ್ಯ ಇಲ್ಲದಿರುವುದನ್ನು ಖಂಡಿಸಿ, ಶಿರೋಳ ಗ್ರಾಮದಲ್ಲಿ ವಿದ್ಯಾರ್ಥಿಗಳು ರಾಜ್ಯ ಹೆದ್ದಾರಿಯನ್ನು ತಡೆದು ದಿಢೀರ್ ಪ್ರತಿಭಟನೆ ನಡೆಸಿದರು.

50ಕ್ಕೂ ಹೆಚ್ಚು ವಿದ್ಯಾರ್ಥಿಗಳು ಸೇರಿ ರಾಜ್ಯ ಹೆದ್ದಾರಿ ತಡೆ ನಡೆಸಿ, ರೋಣ ಡಿಪೋ ಹಾಗೂ ನರಗುಂದ ಡಿಪೋದ ಬಸ್‌ಗಳನ್ನು ತಡೆದು ಸಾರಿಗೆ ಸಂಸ್ಥೆಯ ವಿರುದ್ಧ ಘೋಷಣೆ ಕೂಗಿ ಪ್ರತಿಭಟನೆ ನಡೆಸಿದರು. ಸ್ಥಳೀಯ ಮುಖಂಡರು ಪ್ರತಿಭಟನಾನಿರತ ವಿದ್ಯಾರ್ಥಿಗಳನ್ನು ಪ್ರತಿಭಟನೆ ಹಿಂಪಡೆಯುವಂತೆ ವಿನಂತಿಸಿದರು.

ಈ ಹಿಂದೆ ನಿಮ್ಮ ಮಾತನ್ನು ಗೌರವಿಸಿ ಪ್ರತಿಭಟನೆ ಮೊಟಕುಗೊಳಿಸಿದ್ದೇವೆ. ಆದರೆ ಇದುವರೆಗೂ ವಿದ್ಯಾರ್ಥಿಗಳಿಗೆ ಬಸ್ ಸೌಲಭ್ಯ ಸುಧಾರಿಸಿಲ್ಲ. ವಿದ್ಯಾರ್ಥಿಗಳ ಪರದಾಟ ತಪ್ಪಿಲ್ಲ. ನಾವು ಇಲ್ಲಿಂದ ಕಾಲೇಜು ತಲುಪುವುದರೊಳಗೆ ಒಂದೆರಡು ತರಗತಿಗಳು ಮುಗಿದಿರುತ್ತದೆ.

ಅನೇಕ ಸಲ ಬಸ್ ಬಾರದೆ ಕೊಣ್ಣೂರದಿಂದ ನಡೆದು ಬಂದಿದ್ದೇವೆ.

ಮನವಿ ನೀಡಿ, ವಿನಂತಿಸಿ ಸೋತಿದ್ದೇವೆ, ಅನಿವಾರ್ಯವಾಗಿ ಪ್ರತಿಭಟನೆಯ ಹಾದಿ ಹಿಡಿದಿದ್ದೇವೆ. ಡಿಪೋ ಮ್ಯಾನೇಜರ್ ಸ್ಥಳಕ್ಕೆ ಆಗಮಿಸಿ ನಮ್ಮ ಬೇಡಿಕೆ ಈಡೇರಿಸುವರೆಗೂ ನಾವು ಪ್ರತಿಭಟನೆ ಹಿಂಪಡೆಯುವುದಿಲ್ಲ ಎಂದು ಪಟ್ಟು ಹಿಡಿದರು.

ಪ್ರತಿಭಟನಾ ಸ್ಥಳಕ್ಕೆ ಆಗಮಿಸಿದ ಘಟಕ ವ್ಯವಸ್ಥಾಪಕರಲ್ಲಿ, ಬೆಳಿಗ್ಗೆ ಹಾಗೂ ಸಾಯಂಕಾಲ ಶಾಲಾ-ಕಾಲೇಜು ಸಮಯಕ್ಕೆ ವಿದ್ಯಾರ್ಥಿಗಳ ಸಂಚಾರಕ್ಕೆ ತೊಂದರೆಯಾಗದಂತೆ ಬಸ್ ಸೌಕರ್ಯ ಒದಗಿಸಿ. ನಮ್ಮ ಮನವಿಯನ್ನು ಗಂಭೀರವಾಗಿ ಪರಿಗಣಿಸಿ ಸಮಸ್ಯೆ ಪರಿಹರಿಸಲು ಕೂಡಲೇ ಕ್ರಮ ತಗೊಳ್ಳಿ ಎಂದು ಮನವಿ ಮಾಡಿದರು.

ಮನವಿಗೆ ಸ್ಪಂದಿಸಿದ ಮ್ಯಾನೇಜರ್ ಇನ್ನೆರಡು ದಿನಗಳಲ್ಲಿ ಬಸ್ ಸೌಲಭ್ಯ ಸರಿಪಡಿಸುತ್ತೇವೆ, ಇಲ್ಲವಾದಲ್ಲಿ ವಿದ್ಯಾರ್ಥಿಗಳ ಮುಂದಿನ ನಿಲುವಿಗೆ ನಾವು ಬದ್ಧರಾಗಿರುತ್ತೇವೆ ಎಂದು ಭರವಸೆ ನೀಡಿದರು. ವಿದ್ಯಾರ್ಥಿಗಳ ಪ್ರತಿಭಟನೆಗೆ ಶರಣಪ್ಪ ಕಾಡಪ್ಪನವರ, ಈಶ್ವರಗೌಡ ತಿರಕನಗೌಡ್ರ, ಪ್ರಕಾಶಗೌಡ ತಿರಕನಗೌಡ್ರ, ಬಾಲಪ್ಪ ಮೂಲಿಮನಿ, ಪಕೀರಪ್ಪ ಹಡಪದ, ಗಿರೀಶ ಗಾಣಿಗೇರ ಸೇರಿದಂತೆ ಗ್ರಾಮಸ್ಥರು ಬೆಂಬಲ ಸೂಚಿಸಿದರು. 2-3 ಗಂಟೆಗಳ ಕಾಲ ರಾಜ್ಯ ಹೆದ್ದಾರಿಯಲ್ಲಿ ಸಂಚಾರ ಅಸ್ತವ್ಯಸ್ತಗೊಂಡಿತ್ತು.

# ಸಾರ್ವಜನಿಕರಲ್ಲಿ ಸ್ವಚ್ಛತೆಯ ಅರಿವು ಮೂಡಿಸಿ: ಡಿಸಿ

▶▶ ಮೊದಲನೇ ಪುಟದಿಂದ

ಜಿಲ್ಲೆಯಲ್ಲಿ ಅಕ್ಟೋಬರ್ 2023ರವರೆಗೆ 3 ಮಲೇರಿಯಾ ಪ್ರಕರಣಗಳು, 109 ಡೆಂಗ್ಯೂ ಪ್ರಕರಣಗಳು, 17 ಚಿಕುನ್ ಗುನ್ಯಾ ಪ್ರಕರಣಗಳು ಖಚಿತಪಟ್ಟಿವೆ. ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಕೀಟಜನ್ಯ ರೋಗಗಳು ಬಾರದಂತೆ ಮುಂಜಾಗ್ರತಾ ಕ್ರಮವಾಗಿ ಮನೆ ಮನೆಗೆ ಹೋಗಿ ನೀರಿನ ಸಂಗ್ರಹಣಾ ಪರಿಕರಗಳನ್ನು ಸ್ವಚ್ಛವಾಗಿಟ್ಟುಕೊಳ್ಳುವಂತೆ ಹಾಗೂ ಮನೆಯ ಸುತ್ತಮುತ್ತ ನೀರು ನಿಲ್ಲದಂತೆ ನೋಡಿಕೊಳ್ಳಬೇಕೆಂದು ಸಾರ್ವಜನಿಕರಿಗೆ ತಿಳುವಳಿಕೆ ನೀಡಲಾಗಿದೆ. ನಿಯಮಿತವಾಗಿ ಶಾಲಾ ಮಕ್ಕಳ ಆರೋಗ್ಯ ತಪಾಸಣೆ ನಡೆಸಲಾಗುತ್ತಿದೆ ಎಂದು ಸಭೆಗೆ ಮಾಹಿತಿ ನೀಡಿದರು.

ಇದೇ ಸಂದರ್ಭದಲ್ಲಿ ರಾಷ್ಟ್ರೀಯ ಬಾಲಸ್ವಾಸ್ಥ್ಯ ಕಾರ್ಯಕ್ರಮ, ಐಸಿಡಿಎಸ್, ರಾಷ್ಟ್ರೀಯ ಕ್ಷಯ ರೋಗ ನಿರ್ಮೂಲನೆ, ಐಡಿಎಸ್‌ಪಿ, ಅಂಧತ್ವ ದೃಷ್ಟಿಹೀನತೆಯ ನಿಯಂತ್ರಣಕ್ಕಾಗಿ ರಾಷ್ಟ್ರೀಯ ಕಾರ್ಯಕ್ರಮ ಸೇರಿದಂತೆ ವಿವಿಧ ಕಾರ್ಯಕ್ರಮಗಳ ಪ್ರಗತಿ ಪರಿಶೀಲನೆ ನಡೆಸಲಾಯಿತು.

ಸಭೆಯಲ್ಲಿ ಡಬ್ಲುಎಚ್‌ಓ ಸಲಹೆಗಾರರಾದ ಡಾ.ಮುಕುಂದ ಗಲಗಲಿ, ಜಿಲ್ಲಾ ಆರ್‌ಸಿಎಚ್ ಅಧಿಕಾರಿ ಡಾ. ಮೀನಾಕ್ಷಿ, ಜಿಲ್ಲಾ ಸಮೀಕ್ಷಣಾಧಿಕಾರಿ ಡಾ.ವೆಂಕಟೇಶ ರಾಠೋಡ, ಜಿಲ್ಲಾ ಶಸ್ತ್ರಚಿಕಿತ್ಸಕ ಡಾ. ವಿ.ಸಿ. ಕರಿಗೌಡ್ರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ಪಿ.ವೈ. ಶೆಟ್ಟೆಪ್ಪನವರ, ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಎಂ.ವೈ. ರಡ್ಡೇರ, ತಾಲೂಕಾ ಆರೋಗ್ಯಾಧಿಕಾರಿಗಳು, ವಿವಿಧ ಇಲಾಖೆಯ ಅಧಿಕಾರಿಗಳು ಹಾಜರಿದ್ದರು.

# ಜಿಲ್ಲಾ ಬೀದಿ ಬದಿ ವ್ಯಾಪಾರಿಗಳ ಸಂಘಟನೆಯ ಸಭೆ



■ ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಜಿಲ್ಲಾ ಬೀದಿ ಬದಿ ವ್ಯಾಪಾರಿಗಳ ಸಂಘಟನೆಗಳಿಂದ ಗದಗ ನಗರದ ಲೋಕೋಪಯೋಗಿ ಇಲಾಖೆಯ ಸಭಾಂಗಣದಲ್ಲಿ ಜಿಲ್ಲೆಯ 8 ಸ್ಥಳೀಯ ಸಂಸ್ಥೆಗಳ ಮುಖಂಡರ ನೇತೃತ್ವದಲ್ಲಿ ಸಭೆ ಕರೆದು, ರೋಣ, ಗಜೇಂದ್ರಗಡ, ನರೇಗಲ್, ಮುಂಡರಗಿ, ಶಿರಹಟ್ಟಿ, ಲಕ್ಷ್ಮೇಶ್ವರ, ಮುಳುಗುಂದ, ನರಗುಂದ ಸೇರಿದಂತೆ ಗದಗ ಜಿಲ್ಲೆಯ ಕೇಂದ್ರ ಪ್ರದೇಶದಲ್ಲಿ ಬೀದಿ ವ್ಯಾಪಾರಿಗಳ ಕುಂದು-ಕೊರತೆ ಆಲಿಸಲಾಯಿತು.

ಸಂಘದ ಜಿಲ್ಲಾಧ್ಯಕ್ಷ ಮಕ್ತುಮಸಾಬ ಡಿ.ನಾಲಬಂದರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ, ಜಿಲ್ಲೆಯ ಎಲ್ಲಾ ಸ್ಥಳೀಯ ಸಂಸ್ಥೆಗಳು ಹಾಗೂ ಕೌಶಲ್ಯಾಭಿವೃದ್ಧಿ ಇಲಾಖೆಯು ಜಾಣ ಕುರುಡುತನ ಪ್ರದರ್ಶಿಸುತ್ತಿದ್ದು, ಬೀದಿ ವ್ಯಾಪಾರಿಗಳ ಅಧಿಸೂಚನೆ-2020ರಂತೆ ಪ್ರತ್ಯೇಕ ಶುಲ್ಕ ಸಂಗ್ರಹಿಸಿ ಕ್ರಿಯಾ ಯೋಜನೆ ಮಾಡಬೇಕು. ಆದರೆ ಸ್ಥಳೀಯ ಕಂದಾಯ ಅಧಿಕಾರಿಗಳು ಹಾಗೂ ಮುಖ್ಯಾಧಿಕಾರಿಗಳು ಬೀದಿ ವ್ಯಾಪಾರಿಗಳ ಕೇಂದ್ರ ಹಾಗೂ ರಾಜ್ಯ ಸರ್ಕಾರ ನಿಯಮಗಳನ್ನು ಉಲ್ಲಂಘಿಸಿ ಸಂತೆ ಕರದ ರೂಪದಲ್ಲಿ ಹರಾಜು ಮಾಡುತ್ತಾರೆ. ಸರ್ಕಾರಿ ಆದೇಶವನ್ನು ಗಾಳಿಗೆ ತೂರಿ ಭ್ರಷ್ಟಚಾರ ಮಾಡುತ್ತಿರುವ 8 ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳಿಗೆ ತಕ್ಷಣ ಅಮಾನತು ಮಾಡಲು ಒತ್ತಾಯಿಸಲಾಯಿತು.

ಗದಿಪಡಿಸಿದ ದಿನಾಂಕದಂದು ಜಿಲ್ಲೆಯ 8 ಸ್ಥಳೀಯ ಸಂಸ್ಥೆಗಳ ಮುಖಂಡರ ಸಹಯೋಗದಲ್ಲಿ ಜಿಲ್ಲಾಡಳಿತದ ಮುಂದೆ ಸಂಬಂಧಪಟ್ಟ ಅಧಿಕಾರಿಗಳ ಪ್ರತಿಕೃತ ದಹನ ಮಾಡಿ ಉಗ್ರ ಪ್ರತಿಭಟನೆ ಮಾಡಲು ಒಪ್ಪಿಗೆ ಸೂಚಿಸಲಾಯಿತು. ಸಭೆಯಲ್ಲಿ ಮುಖಂಡರಾದ ಭಾಷಾಸಾಬ ಕರ್ನಾಚಿ, ಬಸವರಾಜ, ಹನುಮಂತಪ್ಪ ಶಿವಕುಮಾರ, ಶಬೀರ, ನಾಗರಾಜ ಶಿರಹಟ್ಟಿ, ಮಂಜುನಾಥ ಹೊಗೆಸೊಪ್ಪಿನ, ಮಾಬುಸಾಬ ಕೊಳ್ಳಿ, ಬಸವರಾಜ, ಜಹಾಂಗೀರ ಮುಳುಗುಂದ ಮುಂತಾದವರು ಉಪಸ್ಥಿತರಿದ್ದರು.

## ವಿಪಕ್ಷಗಳು ಉತ್ತಮ ಸಲಹೆ, ಸಹಕಾರ ನೀಡಲಿ: ಸಿಎಂ



■ವಿಜಯಸಾಕ್ಷಿ ಸುದ್ದಿ, ಬೆಳಗಾವಿ–ಸುವರ್ಣಸೌಧ

ರಾಜ್ಯ ಸರಕಾರವು ಉತ್ತರ ಕರ್ನಾಟಕದ ಸಮಸ್ಯೆಗಳನ್ನು ಮತ್ತು ಬರಗಾಲ ಪರಿಸ್ಥಿತಿ ಕುರಿತು ಮುಕ್ತವಾಗಿ ಚರ್ಚಿಸಲು ಸಿದ್ಧವಿದ್ದು, ವಿಪಕ್ಷಗಳು ಉತ್ತಮ ಸಲಹೆ, ಸಹಕಾರ ನೀಡಲಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಅವರು ಬುಧವಾರ ಸಂಜೆ ವಿಧಾನಸಭೆಯ ಕಲಾಪದ ಶೂನ್ಯ ವೇಳೆಯಲ್ಲಿ ಮಾತನಾಡಿ, ಎರಡು ದಿನಗಳಿಂದ ಸರಕಾರವು ಉತ್ತರ ಕರ್ನಾಟಕ ಸಮಸ್ಯೆಗಳನ್ನು ಮತ್ತು ಬರಗಾಲ ಕುರಿತು ಚರ್ಚಿಸಲು ಕಾಯುತ್ತಿದೆ. ವಿಪಕ್ಷಗಳ ಸದಸ್ಯರು ಸಕ್ರಿಯವಾಗಿ ಭಾಗವಹಿಸಿ, ಸರಕಾರಕ್ಕೆ ಉತ್ತಮ ಸಲಹೆ, ಸಹಕಾರ ನೀಡಬೇಕು. ಸರ್ಕಾರ ವಿಪಕ್ಷಗಳ ಸಲಹೆಗಳನ್ನು ಗಂಭೀರವಾಗಿ ಪರಿಗಣಿಸಲಿದೆ. ಸಭೆ ಅರ್ಥಪೂರ್ಣವಾಗಿ ನಡೆಯಲು ಸಹಕಾರ ನೀಡಬೇಕೆಂದು ಮುಖ್ಯಮಂತ್ರಿಗಳು ಕೋರಿದರು.

## ಅಧಿಕಾರಿ, ಸಿಬ್ಬಂದಿಗಳ ರಕ್ಷಣೆಗೆ ಸರ್ಕಾರ ಬದ್ಧ

■ವಿಜಯಸಾಕ್ಷಿ ಸುದ್ದಿ, ಬೆಳಗಾವಿ–ಸುವರ್ಣಸೌಧ

ಯಾವುದೇ ಸಂದರ್ಭದಲ್ಲಿ ಅಧಿಕಾರಿಗಳು ಮತ್ತು ಸಿಬ್ಬಂದಿಗೆ ರಕ್ಷಣೆ ನೀಡಲು ಸರ್ಕಾರ ಬದ್ಧವಾಗಿದೆ ಎಂದು ಸಚಿವ ಎನ್.ಎಸ್. ಬೋಸರಾಜು ಹೇಳಿದರು. 'ಳಗಾವಿ ಅಧಿವೇಶನದ ಶೂನ್ಯ ವೇಳೆಯಲ್ಲಿ ಮಾತನಾಡಿದ ಸದಸ್ಯರಾದ ಎಸ್.ವಿ.ಸಂಕನೂರ ಧಾರವಾಡ ಜಿಲ್ಲೆಯಲ್ಲಿ ಪಿಡಿಓ ಒಬ್ಬರು ಆರ್‌ಟಿಐ ಕಾರ್ಯಕರ್ತರೊಬ್ಬರಿಂದ ತೀವ್ರ ತೊಂದರೆ ಎದುರಿಸಿ ವಿಷ ಸೇವನೆ ಮಾಡಿ ಆಸ್ಪತ್ರೆ ಸೇರುವಂತಹ ಪರಿಸ್ಥಿತಿ ಬಂದೊದಗಿದೆ.

ಹಿರೇಮಠದ ಜಾತ್ರಾ ಮಹೋತ್ಸವದಲ್ಲಿ ಉಪನ್ಯಾಸ ನೀಡಿದ ಡಾ. ವಿಜಯಲಕ್ಷ್ಮೀ ಬಾಳೇಕುಂದ್ರಿ

# ಪರಮಾತ್ಮನನ್ನು ಮರೆತಾಗ ಅಹಂಕಾರ ಬರುತ್ತದೆ

■ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ಎಲ್ಲವೂ ತನ್ನಿಂದಲೇ ಆಗುತ್ತಿದೆ, ತಾನೇ ಎಲ್ಲದಕ್ಕೂ ಕಾರಣ ಎಂದು ತಿಳಿದು ಮನುಷ್ಯ ಪರಮಾತ್ಮನನ್ನು ಮರೆತು ವರ್ತಿಸತೊಡಗಿದಾಗ ಅವನಲ್ಲಿ ಅಹಂಕಾರ ಬರುತ್ತದೆ. ಅಹಂಕಾರಕ್ಕೆ ಒಳಗಾದ ವ್ಯಕ್ತಿ ಮಾನವನಾಗಿರದೆ ದಾನವನಾಗಿರುತ್ತಾನೆ ಎಂದು ಖ್ಯಾತ ವಾಗ್ಮಿ, ಅಂಕಣಗಾರ್ತಿ ಡಾ. ವಿಜಯಲಕ್ಷ್ಮೀ ಬಾಳೇಕುಂದ್ರಿ ಅಭಿಪ್ರಾಯಪಟ್ಟರು.

ಪಟ್ಟಣದ ಹಿರೇಮಠದಲ್ಲಿ ನಡೆಯುತ್ತಿರುವ ಜಾತ್ರಾ ಮಹೋತ್ಸವದ 5ನೇ ದಿನದ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು 'ಮಹಿಳೆ ಮತ್ತು ಆಧ್ಯಾತ್ಮ' ವಿಷಯ ಕುರಿತು ಮಾತನಾಡಿದರು.

ಆಧ್ಯಾತ್ಮದ ವಿಷಯ ಬಂದಾಗ ಅದರಲ್ಲಿ ಮಹಿಳೆಯರದ್ದೇ ಸಿಂಹಪಾಲು ಎಂಬುದರಲ್ಲಿ ಎರಡು ಮಾತಿಲ್ಲ. ಆದರೆ ಈ ವಿಷಯವನ್ನು ಕೇವಲ ಮಹಿಳೆಯರಿಗೆ ಮಾತ್ರ ಸೀಮಿತಗೊಳಿಸದೆ ಅದನ್ನು ಸಾರ್ವತ್ರಿಕಗೊಳಿಸುವುದು ಒಳಿತು. ಮನುಷ್ಯನಲ್ಲಿ ಅರಿಷಡ್ವರ್ಗಗಳೆಂಬ ವೈರಿಗಳಿವೆ. ಇವುಗಳನ್ನು ಜಯಿಸಿದಾಗಲೇ ಮಾನವ ದೇವನಾಗುತ್ತಾನೆ. ಆದರೆ ಅದನ್ನು ಜಯಿಸುವುದು ಬಹಳ ಕಠಿಣವಿದೆ. ಅದೆಷ್ಟೋ ಋಷಿ ಮುನಿಗಳಿಂದಲೂ ಅದನ್ನು ಜಯಿಸಲು ಸಾಧ್ಯವಾಗಿಲ್ಲ ಎಂಬುದನ್ನು ಅನೇಕ ಪುರಾಣ ಕತೆಗಳು ನಮಗೆ ಸಾರಿ ಹೇಳುತ್ತವೆ. ಹೀಗಿರುವಾಗ,




ನರ ಮಾನವರಾದ ನಮಗೆ ಅವುಗಳನ್ನು ಗೆಲ್ಲುವುದು ಕಷ್ಟ ಸಾಧ್ಯ ಎಂದಾದರೂ, ಇಂತಹ ಕಾರ್ಯಕ್ರಮಗಳಲ್ಲಿ ಪೂಜ್ಯರ ಪ್ರವಚನ ಕೇಳುವ ಮೂಲಕ ಕಿಂಚಿತ್ತಾರದೂ ಮನ ಪರಿವರ್ತನೆಗೆ ಮುಂದಾಗಬೇಕೆಂದರು.

ಈ ಆರನ್ನು ಯೋಗ್ಯವಾಗಿಟ್ಟುಕೊಳ್ಳುವುದೇ ಆರೋಗ್ಯ ಎಂದು ಕರೆಯಿಸಿಕೊಳ್ಳುತ್ತದೆ. ಆರೋಗ್ಯವನ್ನು ಹೊಂದಲು ನಾವು ಏನೆಲ್ಲ ಕಸರತ್ತನ್ನು ಮಾಡುತ್ತೇವೆ. ಬದಲಾಗಿ ನಿರ್ಮಲವಾದ ಮನಸ್ಸನ್ನು ಹೊಂದಿದರೆ ಅದು ಆರೋಗ್ಯಕ್ಕೆ ಸುಲಭವಾದ ಸಾಧನವಾಗುತ್ತದೆ. ಕೋಪವು ಯಾವಾಗಲೂ ಒಳ್ಳೆಯದಲ್ಲ. ಕೋಪವು ರೋಗಗಳ ಕೂಪವಾಗಿದೆ. ಯಾರು ಸರ್ವತ್ರದಲ್ಲಿಯೂ ಭಗವಂತನನ್ನು ಕಾಣುತ್ತಾರೆಯೋ ನಿಜಕ್ಕೂ ಅವರೇ ಆಧ್ಯಾತ್ಮದ ಗಣಿಗಳಾಗುತ್ತಾರೆ ಎಂದು ಡಾ. ಬಾಳೇಕುಂದ್ರಿ ಹೇಳಿದರು.

ಸಭೆಯನ್ನುದ್ದೇಶಿಸಿ ಅನ್ನಪೂರ್ಣಮ್ಮ ಜಿ.ಪಾಟೀಲ, ಮಂಜುಳಾ ರೇವಡಿ ಮಾತನಾಡಿದರು. ಇದೇ ಸಂದರ್ಭದಲ್ಲಿ ಶ್ರೀ ಅನ್ನಪೂರ್ಣೇಶ್ವರಿ ಮಹಿಳಾ ಮಂಡಳದ ವಾರ್ಷಿಕೋತ್ಸವವನ್ನು ಆಚರಿಸಲಾಯಿತು. ವೇದಿಕೆಯ ಮೇಲೆ ಶಿಕ್ಷಕಿ ಎಚ್.ಎಂ. ರತ್ನಮ್ಮ, ಮುಖ್ಯೋಪಾಧ್ಯಾಯೆ ಬಿ.ಜಿ. ಶಿರ್ಸಿ, ನಿವೃತ್ತ ಉಪನ್ಯಾಸಕಿ ಎಲ್.ಸಿ. ಹಿರೇಮಠ, ಶ್ರೀದೇವಿ ಜೋಷಿ ಮತ್ತಿತರರಿದ್ದರು.

ನಿರ್ಮಲಾ ಹಿರೇಮಠ ನಿರೂಪಿಸಿದರು. ಶ್ರೀ ಅನ್ನಪೂರ್ಣೇಶ್ವರಿ ಮಹಿಳಾ ಮಂಡಳದ ಅಧ್ಯಕ್ಷೆ ಕಸ್ತೂರಿ ಧನ್ನೂರ ಸ್ವಾಗತಿಸಿದರು.

ಸಾನ್ನಿಧ್ಯ ವಹಿಸಿದ್ದ ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯರು ಆಶೀರ್ವಚನ ನೀಡಿ, ಹೇಮರಡ್ಡಿ ಮಲ್ಲಮ್ಮಳ ಮದುವೆಯ ವಿವರಣೆ ನೀಡುತ್ತ, ಭಾರತದ ಕೌಟುಂಬಿಕ ವ್ಯವಸ್ಥೆ ಗಟ್ಟಿಯಾಗಿದೆ. ಆದ್ದರಿಂದಲೇ ಅನೇಕ ಆದರ್ಶ ದಂಪತಿಗಳು ಈ ದೇಶದಲ್ಲಿ ಆಗಿ ಹೋಗಿದ್ದಾರೆ. ಅದರಲ್ಲಿ ಸಾಧ್ವಿ ಶಿರೋಮಣಿ ಹೇಮರಡ್ಡಿ ಮಲ್ಲಮ್ಮಳೂ ಒಬ್ಬಳು. ಕಾಮವೊಂದೇ ಮದುವೆಯ ಉದ್ದೇಶವಾಗಬಾರದು. ಮದುವೆ ಸಾಮಾಜಿಕ ವ್ಯವಸ್ಥೆಯನ್ನು ಗಟ್ಟಿಗೊಳಿಸುವ ಒಂದು ಸಾಧನವಾಗಿದೆ. ಮದುವೆಯಾಗುವವರ ಮೇಲೆ ಐದು ಋಣಗಳಿರುತ್ತವೆ. ಇವುಗಳನ್ನು ಅರಿತು ಜೀವನ ಸಾಗಿಸಿದರೆ ಅಂತಹ ದಂಪತಿಗಳ ಬಾಳು ಸುಖಮಯವಾಗುತ್ತದೆ ಎಂದು ತಿಳಿಸಿದರು.

ಗಂಗಾವತಿಯಲ್ಲಿ ವೃದ್ಧನ ಮೇಲೆ ಹಲ್ಲೆ ಪ್ರಕರಣ । ಪೊಲೀಸ್ ವರಿಷ್ಠಾಧಿಕಾರಿಗಳ ಪತ್ರಿಕಾಗೋಷ್ಠಿ

# ಪ್ರಕರಣ ಕುರಿತ ವದಂತಿಗಳು ನಿಜವಲ್ಲ

■ವಿಜಯಸಾಕ್ಷಿ ಸುದ್ದಿ, ಕೊಪ್ಪಳ

ನ.25ರಂದು ಗಂಗಾವತಿಯಲ್ಲಿ ವೃದ್ಧರೊಬ್ಬರ ಮೇಲೆ ನಡೆದ ಹಲ್ಲೆಯ ಕುರಿತು ಸಂತ್ರಸ್ತರು ನೀಡಿದ ದೂರಿನನ್ವಯ ತನಿಖೆ ನಡೆಸಲಾಗಿದ್ದು, ತನಿಖೆಯಲ್ಲಿ ಸಂತ್ರಸ್ತರಿಗೆ ಜೈ ಶ್ರೀರಾಮ್ ಎಂದು ಘೋಷಣೆ ಕೂಗಲು ಒತ್ತಾಯ ಮಾಡಿಲ್ಲ ಎಂಬುದು ಸಾಬೀತಾಗಿದೆ. ಕುಡಿದ ಮತ್ತಿನಲ್ಲಿ ಹಲ್ಲೆ ನಡೆಸಿದ ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಯಶೋಧಾ ವಂಟಗೋಡಿ ಸ್ಪಷ್ಟನೆ ನೀಡಿದರು.

ಗಂಗಾವತಿಯಲ್ಲಿ ಕೋಮು ದ್ವೇಷದಿಂದ ವೃದ್ಧನ ಮೇಲೆ ಹಲ್ಲೆ ಮಾಡಲಾಗಿದೆ ಎಂಬ ವದಂತಿ ಕುರಿತು ಸ್ಪಷ್ಟೀಕರಣ ನೀಡಲು ತಮ್ಮ ಕಾರ್ಯಾಲಯದ



ಸಭಾಂಗಣದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಅವರು ಮಾತನಾಡಿದರು.

ನ.25ರ ಬೆಳಗಿನ ಜಾವ 3 ಗಂಟೆಗೆ ಹುಸೇನಸಾಬ ಹಸನಸಾಬ (65 ವರ್ಷ) ಎಂಬುವವರಿಗೆ ಗಂಗಾವತಿ ಬಸ್ ನಿಲ್ದಾಣದಿಂದ ಯಾರೋ ಇಬ್ಬರು ವ್ಯಕ್ತಿಗಳು ಮೋಟರ್ ಬೈಕ್‌ನಲ್ಲಿ ಕರೆದುಕೊಂಡು ಹೋಗಿ ಹಲ್ಲೆ ಮಾಡಿ, ಕೊಲೆ ಮಾಡಲು ಪ್ರಯತ್ನಿಸಿದ್ದಲ್ಲದೆ ಗಡ್ಡಕ್ಕೆ ಬೆಂಕಿ ಹಚ್ಚಿ ಅವರ ಹತ್ತಿರ ಇದ್ದ ರೂ.250ಗಳನ್ನು ಕಿತ್ತುಕೊಂಡು ಹೋಗಿದ್ದಾರೆ ಎಂದು ಸಂತ್ರಸ್ತರು ನ.30ರಂದು ಗಂಗಾವತಿ ನಗರ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ದೂರಿನನ್ವಯ ಪೊಲೀಸ್ ಠಾಣೆಯಲ್ಲಿ ಗುನ್ನೆ ನಂ.243/2023 ಕಲಂ.394, 307 ಐಪಿಸಿ ಅಡಿ ಪ್ರಕರಣ ದಾಖಲಾಗಿತ್ತು.

ನಂತರ ಎಸ್.ಪಿ ಯಶೋಧಾ ವಂಟಗೋಡಿ ಹಾಗೂ ಗಂಗಾವತಿ ಡಿವೈಎಸ್‌ಪಿ ಸಿದ್ದಲಿಂಗಪ್ಪಗೌಡ ಪಾಟೀಲ್ ಅವರ ಮಾರ್ಗದರ್ಶನದಲ್ಲಿ ತಂಡ ರಚಿಸಿ, ಆರೋಪಿತರ ಪತ್ತೆಗಾಗಿ ನಿರಂತರ ಶ್ರಮಿಸಿ, ಆರೋಪಿತರಾದ ಗಂಗಾವತಿಯ ಸಾಫ್ಟ್‌ವೇರ್ ಇಂಜಿನಿಯರ್ ಕೆ.ಸಾಗರ ಜನಾರ್ಧನಸೆಟ್ಟಿ ಕಲ್ಕಿ(24 ವರ್ಷ) ಹಾಗೂ ನರಸಪ್ಪ ಹೊನ್ನಪ್ಪ ದನಕಾಯರ(25 ವರ್ಷ) ಎಂಬುವವರನ್ನು ಪತ್ತೆ ಮಾಡಿ ದಸ್ತಗಿರಿ ಮಾಡಲಾಗಿದೆ. ಆರೋಪಿತರು ತನಿಖೆಯ ವೇಳೆ ತಮ್ಮಿಂದಾದ ತಪ್ಪನ್ನು ಒಪ್ಪಿಕೊಂಡಿದ್ದಾರೆ. ಈ ಪ್ರಕರಣದ ಕುರಿತು ಬೇರೆ ಯಾವುದೇ ವದಂತಿಗಳು ನಿಜವಲ್ಲ ಎಂದು ತಿಳಿಸಿದರು.

ಈ ಸಂದರ್ಭ ಗಂಗಾವತಿಯ ಡಿವೈಎಸ್‌ಪಿ ಸಿದ್ದಲಿಂಗಪ್ಪಗೌಡ ಪಾಟೀಲ್, ಗಂಗಾವತಿ ನಗರ ಪೊಲೀಸ್ ಠಾಣೆಯ ಪಿಐ ಪ್ರಕಾಶ ಮಾಳಿ ಹಾಗೂ ತನಿಖಾ ತಂಡದ ಸದಸ್ಯರು ಉಪಸ್ಥಿತರಿದ್ದರು.

## ರಿವಾರ್ಡ್ ಯೋಜನೆಯಡಿ ಬೆಂಚುಗಳ ಅಳವಡಿಕೆ



■ವಿಜಯಸಾಕ್ಷಿ ಸುದ್ದಿ, ಮುಳಗುಂದ

ಸರಕಾರಿ ಶಾಲೆಗಳ ಮಕ್ಕಳ ಕಲಿಕೆಗೆ ಬೆಂಚುಗಳು ಸಹಕಾರಿಯಾಗಿವೆ ಎಂದು ಬೆಂಗಳೂರು ಟೇರಿ ಸಂಸ್ಥೆಯ ಎಚ್.ಎಚ್. ನಿಂಗಶೆಟ್ಟಿ ಹೇಳಿದರು.

ಅವರು ಪಟ್ಟಣದ ಸರಕಾರಿ ಮಾದರಿ ಕನ್ನಡ ಗಂಡುಮಕ್ಕಳ ಶಾಲೆ ನಂ.1ರಲ್ಲಿ ವಿಶ್ವ ಬ್ಯಾಂಕ್ ನೆರವಿನ ರಿವಾರ್ಡ್ ಯೋಜನೆಯ ಪ್ರವೇಶ ದ್ವಾರ ಚಟುವಟಿಕೆಯಡಿ ಗದಗ ರಿವಾರ್ಡ್ ಯೋಜನೆಯ ನೀಲಗುಂದ ಉಪ ಜಲಾನಯನ ಪ್ರದೇಶದ ನೀಲಗುಂದ, ಕಣವಿ, ಹೊಸೂರ, ಚಿಂಚಲಿ, ಮುಳಗುಂದ ಸರಕಾರಿ ಶಾಲೆಗಳಿಗೆ ಕೊಡಮಾಡಿದ ಒಟ್ಟು 100 ಬೆಂಚುಗಳ ಅಳವಡಿಕೆಯನ್ನು ವೀಕ್ಷಿಸಿ ಮಾತನಾಡಿದರು.

ಈ ಸಂದರ್ಭದಲ್ಲಿ ಮೀರಾ ಬೀರಣ್ಣವರ, ಹುಲಕೋಟಿ ಕೃಷಿ ಸಹಾಯಕ ಅಧಿಕಾರಿ ಅಶೋಕ ಇಂಗಳಹಳ್ಳಿ, ಮಂಜುನಾಥ ಬ್ಯಾಳಿ, ಶೇಖರ ನಾಯಕ್, ಕಾಶಿಮ್ ಹಾದಿಮನಿ ಶಾಲಾ ಪ್ರಧಾನ ಗುರು ಪಿ.ಬಿ. ಕೆಂಚನಗೌಡರ ಇದ್ದರು.

## ಅಂದಾನಪ್ಪ ದೊಡ್ಡಮೇಟಿ ಸಮಾಧಿ ಸ್ಥಳಕ್ಕೆ ವೀರಯ್ಯಸ್ವಾಮಿ ಭೇಟಿ

■ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ಸಮೀಪದ ಜಕ್ಕಲಿ ಗ್ರಾಮದಲ್ಲಿರುವ ಕರ್ನಾಟಕ ಏಕೀಕರಣದ ರೂವಾರಿ ದಿ. ಅಂದಾನಪ್ಪ ದೊಡ್ಡಮೇಟಿಯವರ ಸಮಾಧಿ ಸ್ಥಳಕ್ಕೆ ಗದಗ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ



ನಿರ್ದೇಶಕ ವೀರಯ್ಯಸ್ವಾಮಿ ಹಿರೇಮಠ ಮತ್ತು ಸಿಬ್ಬಂದಿಗಳು ಭೇಟಿ ನೀಡಿ ವೀಕ್ಷಿಸಿದರು.

ಸರಕಾರದ ಆದೇಶದಂತೆ ಈ ಸ್ಥಳದಲ್ಲಿ ಸ್ಮಾರಕ ನಿರ್ಮಾಣದ ಕಾರ್ಯಗಳನ್ನು ತ್ವರಿತವಾಗಿ ಅನುಷ್ಠಾನಗೊಳಿಸಲಾಗುವುದೆ ಒದರು. ಈ ಕುರಿತು ಸ್ಥಳೀಯ ಮುಖಂಡರೊಂದಿಗೆ ಚರ್ಚಿಸಿದರು. ಬಳಿಕ ದೊಡ್ಡಮೇಟಿಯವರ ಮನೆಗೆ ಆಗಮಿಸಿದ ವೀರಯ್ಯಸ್ವಾಮಿಯವರು, ಮಾತೆ ಭುವನೇಶ್ವರಿಯ ತೈಲವರ್ಣದ ಭಾವಚಿತ್ರವನ್ನು ವೀಕ್ಷಿಸಿ ಅದರ ಪ್ರತಿಯನ್ನು ಪಡೆದುಕೊಂಡರು.

ಈ ವೇಳೆ ನ್ಯಾಯವಾದಿ ರವೀಂದ್ರನಾಥ ದೊಡ್ಡಮೇಟಿ, ಸಾಹಿತಿ ಎಂ.ಎಸ್. ಧಡೇಸೂರಮಠ, ಶಿಕ್ಷಕ ಚಂದ್ರಶೇಖರ ಕೇಸರಿ, ದೊಡ್ಡಮೇಟಿ ಕುಟುಂಬದ ಚನ್ನಬಸವ, ಸಂದೇಶ, ಹರ್ಷವರ್ಧನ್ ದೊಡ್ಡಮೇಟಿ, ಕಳಕಪ್ಪ ರಂಗಣ್ಣವರ ಮುಂತಾದವರಿದ್ದರು.

### ನಿಧನ ವಾರ್ತೆ

**ನಿಂಗಪ್ಪ ಮಡಿವಾಳರ**



ನರೇಗಲ್ಲ, ಪಟ್ಟಣದ ಹಿರೇಮಠ ಓಣಿಯ ನಿವಾಸಿ ಪತ್ರಕರ್ತ ನಿಂಗಪ್ಪ ಬಸಪ್ಪ ಮಡಿವಾಳರ(45) ಬುಧವಾರ ಹೃದಯಾಘಾತದಿಂದ ನಿಧನರಾಗಿದ್ದಾರೆ. ಮೃತರಿಗೆ ತಾಯಿ, ಪತ್ನಿ, ಪುತ್ರ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು ಬಳಗವಿದೆ.

ಸಂತಾಪ : ನರೇಗಲ್ಲ ಹೋಬಳಿ ಕಾರ್ಯನಿರತ ಪತ್ರಕರ್ತರ ಸಂಘದ ಸದಸ್ಯರು ಸಂತಾಪ ಸೂಚಿಸಿದ್ದಾರೆ.

**ನಾಗರಾಜ ಶಿವಪ್ಪ ಬಿಂಕದಕಟ್ಟಿ**



ಲಕ್ಷ್ಮೇಶ್ವರ: ಪಟ್ಟಣದ ವರ್ತಕ ನಾಗರಾಜ ಶಿವಪ್ಪ ಬಿಂಕದಕಟ್ಟಿ (52) ಬುಧವಾರ ರಾತ್ರಿ ನಿಧನರಾದರು. ಮೃತರಿಗೆ ಪತ್ನಿ, ಮೂವರು ಪುತ್ರರು, ಸಹೋದರರು ಸೇರಿದಂತೆ ಅಪಾರ ಬಂಧು–ಬಳಗವಿದೆ.

## ರೈತ ಆತ್ಮಹತ್ಯೆಗೆ ಶರಣು

■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ



ಪಟ್ಟಣದ ರಂಗನಗೌಡ ಭರಮಗೌಡ ಪಾಟೀಲ(50) ಎಂಬ ರೈತ ಸಾಲದ ಬಾಧೆಗೆ ಮನನೊಂದು ಬುಧವಾರ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ನಡೆದಿದೆ.

ರೈತ ರಂಗನಗೌಡ ಪಾಟೀಲ ತನ್ನ 4 ಎಕರೆ, 18ಗುಂಟೆ ಜಮೀನಿನ ಮೇಲೆ ಪಟ್ಟಣದ ಕೆವಿಜಿ ಬ್ಯಾಂಕಿನಲ್ಲಿ 6 ಲಕ್ಷ ರೂ. ಸಾಲ ಪಡೆದಿದ್ದರು. ಜಮೀನಿನಲ್ಲಿ ಬಿತ್ತನೆ ಮಾಡಿದ್ದ ಗೋವಿನ ಜೋಳ ಈ ವರ್ಷ ಬರಗಾಲದಿಂದ ಒಣಗಿ ಹೋಗಿದೆ. ಕಳೆದ ವರ್ಷ ಅತಿವೃಷ್ಟಿಯಿಂದ ಬೆಳೆ ಹಾಳಾಗಿತ್ತು. ಸಾಲ ತೀರಿಸುವುದು ಹೇಗೆಂಬ ಚಿಂತೆಯಲ್ಲಿ ತಮ್ಮ ವಾಸದ ಮನೆಯ ಹತ್ತಿರದ ಬೇವಿನ ಮರಕ್ಕೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಸ್ಥಳಕ್ಕೆ ಕಂದಾಯ ಅಧಿಕಾರಿಗಳು ಭೇಟಿ ನೀಡಿ, ಮಾಹಿತಿ ಪಡೆದುಕೊಂಡಿದ್ದಾರೆ. ಈ ಕುರಿತಂತೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನೀರಾವರಿ ಉಪಕರಣಗಳಿಗೆ ದರ ಪರಿಷ್ಕರಣೆ । ದುಪ್ಪಟ್ಟು ಹಣ ತುಂಬುವಂತೆ ಕೃಷಿ ಇಲಾಖೆಯ ಆದೇಶ

# ರೈತ ಸಂಪರ್ಕ ಕೇಂದ್ರಕ್ಕೆ ಬೀಗ ಹಾಕಿ ಪ್ರತಿಭಟನೆ

■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಹನಿ ನೀರಾವರಿ ಸ್ಪಿಂಕ್ಲರ್ ಪೈಪ್‌ಗಳಿಗೆ ಕಳೆದ ವರ್ಷವೇ ರೈತರು ಹಣ ಕಟ್ಟಿದ್ದರೂ ಸ್ಪಿಂಕ್ಲರ್ ಸೆಟ್ ಕೊಡದೇ ಮತ್ತೆ ಈ ವರ್ಷ ಹೆಚ್ಚುವರಿ ಹಣ ಪಾವತಿಸುವಂತೆ ಆದೇಶಿಸಿದ ಕೃಷಿ ಇಲಾಖೆಯ ಕ್ರಮ ಖಂಡಿಸಿದ ರೈತರು ಬುಧವಾರ ಪಟ್ಟಣದ ರೈತ ಸಂಪರ್ಕ ಕೇಂದ್ರದ ಸಿಬ್ಬಂದಿಗಳನ್ನು ಹೊರಗೆ ಹಾಕಿ ಕೇಂದ್ರದ ಬಾಗಿಲು ಮುಚ್ಚಿ ಪ್ರತಿಭಟಿಸಿದರು.

ರೈತ ಸಂಘದ ಬಾಲೆಹೊಸೂರ ಗ್ರಾಮ ಘಟಕಾಧ್ಯಕ್ಷ ಲೋಕೇಶ ಜಾಲವಾಡಗಿ ಮಾತನಾಡಿ, ತಾಲೂಕಿನ ನೂರಾರು ರೈತರು ಕಳೆದ ವರ್ಷವೇ ಸ್ಪಿಂಕ್ಲರ್ ಸೆಟ್‌ಗಾಗಿ 1999 ರೂ ಆರ್‌ಟಿಜಿಎಸ್ ಮುಖಾಂತರ ಹಣ ಕಟ್ಟಿದರೂ ಕೆಲವೇ ರೈತರಿಗೆ ಸ್ಪಿಂಕ್ಲರ ಪೈಪ್ ನೀಡಿದ್ದಾರೆ. ಇನ್ನುಳಿದ



ರೈತರಿಗೆ ಸ್ಪಿಂಕ್ಲರ್ ಸೆಟ್‌ನ ಪರಿಷ್ಕೃತ ದರವೆಂದು 4033 ರೂ ಪಾವತಿಸಬೇಕು ಎಂದು ಅಧಿಕಾರಿಗಳು ಹೇಳುತ್ತಿದ್ದಾರೆ. ಆದರೆ ನಾವು ವರ್ಷಗಳಿಂದ ಅಲೆದಾಡುತ್ತಿದ್ದು, ಮೊದಲು ಸ್ಪಿಂಕ್ಲರ್ ಸೆಟ್‌ಗೆ ಪಾವತಿಸಿದ ದರದಲ್ಲಿಯೇ ಪೈಪುಗಳನ್ನು ಒದಗಿಸಬೇಕು. ಅರ್ಜಿ ಸಲ್ಲಿಸಿ ಹಣ ಪಾವತಿಸಿದ ಎಲ್ಲ ರೈತರಿಗೂ ಹಳೆಯ ದರದಲ್ಲಿಯೇ ಉಪಕರಣ ಕೊಡಬೇಕು ಎಂದು ಪಟ್ಟು ಹಿಡಿದರು.

ಈ ವೇಳೆ ಕೃಷಿ ಇಲಾಖೆ ಅಧಿಕಾರಿ ಪಿ.ಕೆ. ಹೊನ್ನಪ್ಪನವರ ಮತ್ತು ಸಿಬ್ಬಂದಿಗಳು ಎಷ್ಟೇ ಸಮಜಾಯಿಷಿ ಹೇಳಿದರೂ ರೈತರು ಒಪ್ಪಲಿಲ್ಲ. ಈ ವೇಳೆ ಸ್ಥಳಕ್ಕೆ ಆಗಮಿಸಿದ ಕ್ರೈಮ್ ಪಿಎಸ್‌ಐ ವಿ.ಜಿ. ಪವಾರ, ಎಎಸ್‌ಐ ವೈ.ಎಸ್. ಕ್ಯೂಬಿಹಾಳ ಮೇಲಾಧಿಕಾರಿಗಳೊಂದಿಗೆ ಮಾತನಾಡಿದರು. ಹಿರಿಯ ಅಧಿಕಾರಿಗಳು ಲಕ್ಷ್ಮೇಶ್ವರ ಕೃಷಿ ಕೇಂದ್ರಕ್ಕೆ ಬಂದು ರೈತರಿಗೆ ತಿಳಿಹೇಳಿ ಸಮಸ್ಯೆ ಬಗೆಹರಿಸುತ್ತೇವೆ ಎಂದು ಹೇಳಿದ ನಂತರ ರೈತರು ಪ್ರತಿಭಟನೆ ಹಿಂಪಡೆದರು.

ನಿಂಗಪ್ಪ ಗುಡ್ಡಣ್ಣವರ, ಉದಯ ಭರಮಗೌಡ್ರ, ಸೋಮನಗೌಡ ಸಿಂಗಟಾಲೂರ, ಶಿದ್ಲಿಂಗಪ್ಪ ಪ್ಯಾಟಿ, ನಿಂಗಪ್ಪ ವಡ್ಡಣ್ಣಿ, ಶಿವರುದ್ರಪ್ಪ ಲೋಹಾರ, ಹಾಲಪ್ಪ ಹರಿಜನ, ಸಂತೋಷ ಲಮಾಣಿ ಸೇರಿದಂತೆ ಹಲವು ರೈತರಿದ್ದರು.

# ಡಾ. ಬಿ.ಆರ್. ಅಂಬೇಡ್ಕರರ ಚೈತ್ಯ ಭೂಮಿ ದರ್ಶನ

■ವಿಜಯಸಾಕ್ಷಿ ಸುದ್ದಿ, ಗದಗ

67ನೇ ಮಹಾಪರಿನಿರ್ವಾಣ ದಿನದ ಅಂಗವಾಗಿ ಜೈ ಭೀಮ ಸಂಘರ್ಷ ಸಮಿತಿಯ ಸದಸ್ಯರು ಗದಗ ಜಿಲ್ಲಾಧ್ಯಕ್ಷ ಗಣೇಶ ವಾಯ್.ಹುಬ್ಬಳ್ಳಿ ನೇತೃತ್ವದಲ್ಲಿ ಮುಂಬೈನ ದಾದರ್‌ನಲ್ಲಿರುವ ಡಾ. ಅಂಬೇಡ್ಕರರ ಸ್ಮಾರಕದ ದರ್ಶನ ಪಡೆದರು.



ಈ ಸಂದರ್ಭದಲ್ಲಿ ಯಲ್ಲಮ್ಮ ಹುಬ್ಬಳ್ಳಿ, ನಾಗವ್ವ ತೌಜುಲ್, ಹುಲಿಗೆಮ್ಮ, ಸೌಂದರ್ಯ ಹುಬ್ಬಳ್ಳಿ, ತೇಜಸ್ವಿನಿ ಹುಬ್ಬಳ್ಳಿ, ಯಶವಂತ ಹುಬ್ಬಳ್ಳಿ, ಸುಜಲ್ ಹುಬ್ಬಳ್ಳಿ, ಪೂಜಾ ತೌಜುಲ್, ಅಕ್ಷಯ್ ತೌಜುಲ್, ಆನಂದ್, ಕಿರಣ, ಶ್ರೀಕಾಂತ್ ಕಟ್ಟಿಮನಿ, ದಂಡವ್ವ ಸೋಂಪುರ, ರಾಹುಲ್ ಬಳ್ಳಾರಿ, ಶಶಾಂಕ್, ದರ್ಶನ, ಸಮಿತಿಯ ಉಪಾಧ್ಯಕ್ಷ ಮಂಜುನಾಥ ಎಫ್.ತೌಜಲ್, ರೋಣ ತಾಲೂಕಾಧ್ಯಕ್ಷ ಬಸವರಾಜ ಬದಾಮಿ, ಅಲ್ಪಸಂಖ್ಯಾತರ ಘಟಕದ ಜಿಲ್ಲಾಧ್ಯಕ್ಷ ರಾಷ್ಟ್ರೀನ್ ಜೋಸೆಫ್, ಅಲ್ಪಸಂಖ್ಯಾತರ ಘಟಕದ ಜಿಲ್ಲಾ ಉಪಾಧ್ಯಕ್ಷ ರಾಜೇಶ ವಿ.ಶೆಟ್ಟರ್, ಸಹ–ಕಾರ್ಯದರ್ಶಿ ಶಿವಣ್ಣ ಕಡಿವಾಲ, ಹೇಮಂತ ಹುಬ್ಬಳ್ಳಿ, ಯಶವಂತ ಹುಬ್ಬಳ್ಳಿ, ಚಾರು ಹೆಚ್.ರಾಮಗಿರಿ, ಕೃಷ್ಣಪ್ಪ ಮಡಿವಾಳರ ಮುಂತಾದವರಿದ್ದರು.

VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka